ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 7 ಸಂಚಿಕೆ 6 ಜೂನ್ 2022



ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಎನ್.ವಿ. ರಮಣರವರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಶಿವಮಾಲಾರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (29 ಮೇ 2022)



ಊಟಿಯ ತೀಟಕಲ್‌ನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಆಜಾದಿ ಕಾ ಅಮೃತ್ ಮಹೋತ್ಸವ್–2022ರ ಅಂಗವಾಗಿ ನೀಲಗಿರಿಯ ಕೂನೂರಿನ ನೃತ್ಯಸೇವಾ ನಿಕೇತನ ತಂಡದವರು ಸಾದರಪಡಿಸಿದ ಶಿವೋಹಂ ನೃತ್ಯರೂಪಕ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಹಾಗೂ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಶ್ರೀ ಎಸ್.ಕೆ. ಕೃಷ್ಣಮೂರ್ತಿ ಹಾಗೂ ಶ್ರೀ ಎಚ್.ಆರ್.ಎಂ. ಭೋಜರಾಜನ್‌ರವರುಗಳಿದ್ದಾರೆ (20 ಮೇ 2022)




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿಯ 11ನೇ ಉಪನ್ಯಾಸ ಕಾರ್ಯಕ್ರಮದಲ್ಲಿ ಬಡತನ ಮತ್ತು ಸುಸ್ಥಿರತೆ ಕುರಿತು ಡಾ. ಹರೀಶ್ ಹಂದೆಯವರು ಮಾತನಾಡುತ್ತಿರುವುದು. ಡಾ. ಬಗಾದಿ ಗೌತಮ್, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹಾಗೂ ಶ್ರೀ ಬಿ.ಆರ್. ಪೈರವರುಗಳಿದ್ದಾರೆ (26 ಮೇ 2022)

## ಜೀವನವನ್ನು ಸಕಾರಾತ್ಮವಾಗಿ ಸ್ವೀಕರಿಸಬೇಕು

ಜೀವನದಲ್ಲಿ ಉತ್ಸಾಹವಿರಬೇಕೆಂದರೆ ಬಂದುದ್ದೆಲ್ಲವನ್ನು ಸಕಾರಾತ್ಮಕವಾಗಿ ಸ್ವೀಕರಿಸಬೇಕೆಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

**ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ** ನೀಲಗಿರಿಯ ಕೂನೂರಿನ ನೃತ್ಯಸೇವಾ ನಿಕೇತನ ತಂಡದವರು 'ಆಜಾದಿ ಕಾ ಅಮೃತ್ ಮಹೋತ್ಸವ್-2022'ರ ಅಂಗವಾಗಿ ದಿನಾಂಕ 20.5.2022ರಂದು ಆಯೋಜಿಸಿದ್ದ ಶಿವೋಹಂ ನೃತ್ಯರೂಪಕ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಜೀವನದಲ್ಲಿ ಉತ್ತಮವಾದುದನ್ನು ಮಾತ್ರವೇ ಅನುಭವಿಸುತ್ತಿರಬೇಕು. ಆದರೂ ಯಾವುದಕ್ಕೂ ಅಂಟಿಕೊಂಡಿರಬಾರದು. ಹಾಗಾದರೆ ಮಾತ್ರ ಜೀವನದಲ್ಲಿ ಸುಖ, ಸಂತೋಷವನ್ನು ಕಾಣಬಹುದು. ಬದುಕಿನಲ್ಲಿ ಏನೆಲ್ಲ ಸಂಪಾದನೆ ಮಾಡಿದರೂ ಏನನ್ನೂ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು. ಬದುಕಿದ್ದಾಗಲೂ ನಮ್ಮ ಜೊತೆ ಏನೂ ಇಲ್ಲ ಎಂದುಕೊಂಡರೆ ಜೀವನ ಸುಖಮಯವಾಗಿರುತ್ತದೆ. ಬಸವಣ್ಣನವರು ಹೇಳಿದಂತೆ ಎಲ್ಲಾ ಕೆಲಸವನ್ನು ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು ಎಂಬಂತೆ ನಡೆದುಕೊಂಡರೆ ಜೀವನ ಸಂತೋಷದಿಂದ ಕೂಡಿರುತ್ತದೆ ಎಂದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಜೀವನದಲ್ಲಿ ಯಾರು ಸೃಜನಶೀಲ ಮನಸ್ಥಿತಿಯಿಂದ ಕಲೆಗಳನ್ನು ರೂಢಿಸಿಕೊಳ್ಳುತ್ತಾರೊ ಅವರ ಬದುಕು ಸುಂದರವಾಗಿರುತ್ತದೆ. ನಿಸ್ವಾರ್ಥಸೇವೆ, ದಯೆ, ಅನುಕಂಪದೊಂದಿಗೆ ಎಲ್ಲರನ್ನೂ ಪ್ರೀತಿಯಿಂದ ಕಂಡರೆ ನಮ್ಮಲ್ಲಿ ಜೀವನೋತ್ಸಾಹ ಹೆಚ್ಚುತ್ತದೆ. ಪರಮಪೂಜ್ಯ ಜಗದ್ಗುರುಗಳವರ ಕಾರ್ಯಚಟುವಟಿಕೆಗಳನ್ನು ಕಂಡರೆ ನಮ್ಮಲ್ಲಿ ಮತ್ತಷ್ಟು ಜೀವನೋತ್ಸಾಹ ಉಂಟಾಗುತ್ತದೆ. ಮಾನವೀಯತೆ ನಮ್ಮ ಬದುಕಿನ ಭಾಗವಾಗಬೇಕು. ಎಲ್ಲರೂ ನನ್ನವರೆನ್ನುವ ಮನೋಭಾವನೆ ಒಳಿತೆಂದು ತಿಳಿಸಿದರು.

ಮಾಜಿ ಸಚಿವರು ಹಾಗೂ ಕರ್ನಾಟಕ ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ಸಂದಿವೆ. ಈ ಸಂದರ್ಭದಲ್ಲಿ ದೇಶದ ಜನರಿಗೆ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಬೇಕೆನ್ನುವ ಸದುದ್ದೇಶದಿಂದ ದೇಶದ ಪ್ರಧಾನಮಂತ್ರಿಗಳು ಆಜಾದಿ ಕಾ ಅಮೃತ್ ಮಹೋತ್ಸವ್-2022 ಎನ್ನುವ ವಿನೂತನ ಕಾರ್ಯಕ್ರಮವನ್ನು ದೇಶಾದ್ಯಂತ ವರ್ಷಪೂರ್ತಿಯಾಗಿ ಆಚರಿಸುವಂತೆ ಕರೆ ನೀಡಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಂಯುಕ್ತಾಶ್ರಯದಲ್ಲಿ ಶಿವೋಹಂ ಎನ್ನುವ ನೃತ್ಯರೂಪಕವನ್ನು ಏರ್ಪಡಿಸಿರುವುದು ಅರ್ಥಪೂರ್ಣವಾಗಿದೆ. ನಾನು ಶ್ರೀಮಠದೊಂದಿಗೆ 40 ವರ್ಷಗಳಿಂದಲೂ ನಿಕಟ ಸಂಪರ್ಕವನ್ನು ಹೊಂದಿದ್ದು ಪರಮಪೂಜ್ಯರ ಆಶೀರ್ವಾದ ನನ್ನ ಮೇಲೆ ಸದಾ ಇದೆ ಎಂದು ತಿಳಿಸಿದರು.

ಊಟಿಯ ದೊಡ್ಡಬೆಟ್ಟ ಟೀ ಫ್ಯಾಕ್ಟರಿ ಮತ್ತು ಟೀ ವಸ್ತುಸಂಗ್ರಹಾಲಯದ ವ್ಯವಸ್ಥಾಪಕ ಪಾಲುದಾರರು ಹಾಗೂ ಕರ್ನಾಟಕ ಸನಾತನ ಸಾಹಿತ್ಯ ಸಂಘದ ಪೋಷಕರಾದ ಶ್ರೀ ಎನ್.ಕೆ. ಕೃಷ್ಣಮೂರ್ತಿಯವರು ಪರಮಪೂಜ್ಯರು ಶ್ರೇಷ್ಠವಾದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಊಟಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ನಮ್ಮ ಈ ಭಾಗದ ಜನರಿಗೆ ಅನುಕೂಲವಾಗುವಂತೆ ಮಾಡಿದ್ದಾರೆ. ಇನ್ನೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸುತ್ತಮುತ್ತಲಿನ ಗ್ರಾಮಾಂತರದ ಬಡಜನರಿಗೆ ನೆರವಾಗಬೇಕೆಂದು ಕೋರಿದರು.

ಕೋತಗಿರಿಯ ಟೀ ಬೋರ್ಡ್ ಆಫ್ ಇಂಡಿಯಾದ ಮಾಜಿ ಉಪಾಧ್ಯಕ್ಷರು ಹಾಗೂ ಹಿಟ್ಟಕಲ್ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಎಚ್.ಆರ್.ಎಂ. ಭೋಜರಾಜನ್‌ರವರು ಈ ನೃತ್ಯರೂಪಕ ಕಾರ್ಯಕ್ರಮವನ್ನು ಆಯೋಜಿಸಿರುವುದು ಅರ್ಥಪೂರ್ಣವಾಗಿದೆ. ಪರಮಪೂಜ್ಯರ ದೂರದೃಷ್ಟಿಯಿಂದ ಜೀವನೋತ್ಸಾಹ ಶಿಬಿರದಂತಹ ಕಾರ್ಯಕ್ರಮಗಳು ನಡೆಯುತ್ತಿರುವುದು ಶ್ರೇಷ್ಠ ಕಾರ್ಯವೆಂದು ತಿಳಿಸಿದರು.

ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಪಿ. ಧನಬಾಲ್ ಸ್ವಾಗತಿಸಿದರು. ಫಾರ್ಮಸಿ ಕಾಲೇಜಿನ ಆಡಳಿತಾಧಿಕಾರಿಗಳಾದ ಶ್ರೀ ಎಚ್.ಕೆ. ಬಸವಣ್ಣ ವಂದಿಸಿದರು. ಶ್ರೀ ಎಚ್.ಎಸ್. ಸಿದ್ದಮಲ್ಲಿಕಾರ್ಜುನಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

## ಸತ್ಯ ವಸ್ತುವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಬದುಕು



ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರವನ್ನು ಬೆಳಗಾವಿ ಜಿಲ್ಲೆಯ ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಸಂಚಾಲಕರು ಹಾಗೂ ಶಿಬಿರಾರ್ಥಿಗಳನ್ನು ಕಾಣಬಹುದು.

ಜೀವನ ಅನಿರ್ವಚನೀಯವಾದುದು, ಮನುಷ್ಯ ಆತ್ಮ ಜ್ಞಾನಿಯಾದರೆ ನವನೀತದಂತೆ ತೇಲುತ್ತಾನೆಯೇ ಹೊರತು ಮುಳುಗುವುದಿಲ್ಲ. ಸತ್ಯ ವಸ್ತುವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಬದುಕು ಎಂದು ಬೆಳಗಾವಿ ಜಿಲ್ಲೆ ಘೋಡಗೇರಿಯ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯಸ್ವಾಮಿಗಳು ತಿಳಿಸಿದರು.

**ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ** ದಿನಾಂಕ 18 ರಿಂದ 23 ಮೇ 2022ರವರೆಗೆ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ ಆಧ್ಯಾತ್ಮಿಕ ಚಿಂತನೆ ಎಂಬ ವಿಷಯದ ಕುರಿತು ಮಾತನಾಡುತ್ತಾ ಮಾನವನಿಗೆ ಅತೀ ಮುಖ್ಯವಾದುದು ಆಧ್ಯಾತ್ಮದ ಚಿಂತನೆ. ಮೂಲಭೂತ ವಸ್ತುವಾದ ಆತ್ಮ ನಾಶವಿಲ್ಲದ್ದು. ಚಿತೆ –ಚಿಂತೆ – ಚಿಂತನೆ ಈ ಮೂರು. ವಿಷಯಗಳು ನಾಶಮಾಡುವ ಕ್ರಿಯೆಯನ್ನು ಒಳಗೊಂಡಿರುತ್ತವೆ. ಚಿತೆ ಯಾವುದು ಬೇಡ ಅದನ್ನು ಸುಟ್ಟು ನಾಶ ಮಾಡುತ್ತದೆ, ಶರೀರವನ್ನು ಸುಡುವ ಶಕ್ತಿ ಅದಕ್ಕಿದೆ. ಚಿಂತೆ ವಿಷಯಾಸಕ್ತಿಗಳ ಮೂಲಕ ಬದುಕುವವರ ಮಾನಸಿಕ ನೆಮ್ಮದಿಯನ್ನು ಹಾಳುಮಾಡುತ್ತದೆ. ಮನುಷ್ಯನನ್ನು ಸುಡುತ್ತದೆ, ಕುಟುಂಬವನ್ನು, ಸಮಾಜವನ್ನೂ ನಾಶಮಾಡುತ್ತದೆ. ಚಿಂತನೆ ನಮ್ಮೊಳಗಿನ ಅಜ್ಞಾನವನ್ನು

ನಾಶಮಾಡುತ್ತದೆ. ವಿವೇಚನೆಯುಕ್ತವಾದ, ಆಧ್ಯಾತ್ಮಿಕವಾದ ಬದುಕೆ ಚಿಂತನೆ. ಜನನ, ಜೀವನ, ಮರಣಕ್ಕೆ ಕಾರಣಕರ್ತ ಯಾರು ಎಂದು ಆಲೋಚಿಸುವುದೇ ಚಿಂತನೆಯಾಗಿದೆ, ಹಾಗಾಗಿ ಇಂತಹ ಶಿಬಿರಗಳು ನಮ್ಮ ಅರಿವಿನ ಕ್ಷಿತಿಜವನ್ನು ವಿಸ್ತರಿಸಿಕೊಳ್ಳಲು ನೆರವಾಗುತ್ತವೆ. ಯೋಗ, ಧ್ಯಾನ, ಚಿಂತನ ಗೋಷ್ಠಿ, ಸತ್ಸಂಗಗಳಿಂದ ನಮ್ಮ ಬದುಕನ್ನು ಪವಿತ್ರಗೊಳಿಸಿಕೊಳ್ಳಬಹುದು. ಬಸವಣ್ಣನ ಶಕ್ತಿ, ಅಲ್ಲಮನ ಶೂನ್ಯ ಭಾವ ಆವರಿಸಿಕೊಳ್ಳುವಂತೆ ಬದುಕುವುದೇ ಶ್ರೇಷ್ಠ ಜೀವನವೆಂದು ತಿಳಿಸಿದರು.

ವಿಜಯಪುರ ಶಾಖಾಹಾರಿ ಸಂಘದ ಅಧ್ಯಕ್ಷರಾದ ಶ್ರೀ ಪ್ರಕಾಶ್ ಸಿಂಗ್ ಹಜೇರಿ ಅವರು 'ನಿಯಮಿತ ಆಹಾರ' ಎಂಬ ವಿಷಯ ಕುರಿತು ಎರಡನೇ ಉಪನ್ಯಾಸದಲ್ಲಿ ನಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸ್ಥಿರವಾಗಿರಬೇಕೆಂದರೆ ಶಾಖಾಹಾರವೇ ಉತ್ತಮ ಎಂದು ತಿಳಿಸಿದರು. ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಡಾ. ಡಿ.ವಿ. ಗುರುಪ್ರಸಾದ್ ಅವರು 'ಸೈಬರ್– ಜಾಗೃತಿ' ಎಂಬ ವಿಷಯ ಕುರಿತು ಮಾತನಾಡುತ್ತಾ ಹಿರಿಯ ನಾಗರಿಕರು ಇಂದು ಹೆಚ್ಚು ಸೈಬರ್ ಕ್ರೈಮ್‌ಗೆ ಒಳಗಾಗುತ್ತಿದ್ದಾರೆ ಇದರ ಬಗ್ಗೆ ಹೆಚ್ಚು ಜಾಗೃತ ವಹಿಸಬೇಕಾಗಿದೆ. ಇಂದಿನ ತಾಂತ್ರಿಕ ಯುಗದಲ್ಲಿ ಮೋಸ ವಂಚನೆಗೆ ಒಳಗಾಗುವ ಜನರು ಹೆಚ್ಚಾಗಿದ್ದಾರೆ. ಇಂತಹ ವಂಚನೆಗೆ ಪೊಲೀಸ್ ಅಧಿಕಾರಿಗಳೂ ಸಹ ಒಳಗಾಗಿರುವುದು ಸೋಜಿಗ. ಆದರೆ ಮೋಸ ಮಾಡುವವರಿಗೆ ಪೊಲೀಸರಾದರೇನು, ಜನ ಸಾಮಾನ್ಯರಾದರೇನು, ವಂಚಕರಿಗೆ ವಂಚನೆ ಹೊರತುಪಡಿಸಿ ಬೇರಾವುದೇ ಆಲೋಚನೆಗಳಿಲ್ಲ. ಹಾಗಾಗಿ ಇಂತಹ ಅಕ್ರಮಗಳಿಂದ ಮುಕ್ತರಾಗಬೇಕೆಂದರೆ ಅರಿವು ಮುಖ್ಯವಾಗಿದೆ. ಸಾಮಾಜಿಕ ಜಾಲತಾಣಗಳನ್ನು ಜಾಗೃತವಾಗಿ ಬಳಸಬೇಕು. ಬ್ಯಾಂಕುಗಳ ಹೆಸರಿನಲ್ಲಿ ಅಪರಿಚಿತರಿಂದ ಬರುವ ಕರೆಗಳನ್ನು ಸ್ವೀಕರಿಸುವುದರಿಂದ ಮೋಸ ಹೋಗುವ ಸಾಧ್ಯತೆ ಹೆಚ್ಚಿದೆ. ಓಟಿಪಿ ಸಂಖ್ಯೆಯನ್ನು ಕೇಳುವ ಕರೆಗಳು ಹಾಗೂ ನಿಮ್ಮ ಮೊಬೈಲ್ ನಂಬರ್‌ಗೆ ಬಹುಮಾನ ಬಂದಿದೆ ಎಂದು ನಮ್ಮಲ್ಲಿ ಆಸೆ ಹುಟ್ಟಿಸಿ ವಂಚನೆ ಮಾಡುವ ಜಾಲವೇ ಇದೆ. ಇದು ಎಲ್ಲಿಂದ ಆಗುತ್ತಿದೆ, ಯಾರು ಮಾಡುತ್ತಾರೆ ಎಂದು ತಿಳಿಯುವುದು ಕಷ್ಟವಾಗಿದೆ. ಸೈಬರ್ ಕ್ರೈಮ್ ಅನ್ನುವುದು ಜಗದಗಲ ವಿಸ್ತರಿಸಿದೆ. ದೊಡ್ಡ ದೊಡ್ಡ ಬ್ಯಾಂಕ್‌ಗಳು ಕೂಡ ವಂಚನೆಗೆ ಒಳಗಾಗಿವೆ ಎಂದು ತಮ್ಮ ಸ್ವಂತ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಶಿಬಿರಾರ್ಥಿಗಳಲ್ಲಿ ಸೈಬರ್ ಕ್ರೈಮ್ ಜಾಗೃತಿ ಮೂಡಿಸಿದರು.

## ಜೀವನೋತ್ಸಾಹ ಶಿಬಿರದ ಉಪನ್ಯಾಸ ಮಾಲೆ

### ಬದುಕಿನ ದಿವ್ಯ ಕ್ಷಣಗಳನ್ನು ಅನುಭವಿಸಲು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು

ಆರೋಗ್ಯವೆನ್ನುವುದು ಮನುಷ್ಯನ ದೇಹಕ್ಕೂ, ಮನಸ್ಸಿಗೂ ಸಂಬಂಧಪಟ್ಟಿದೆ. ದೇಹ ಹಾಗೂ ಮನಸ್ಸು ಆರೋಗ್ಯದಿಂದ ಕೂಡಿದ್ದರೆ ಸಮಾಜವು ಆರೋಗ್ಯಕರವಾಗಿರುತ್ತದೆ ಎಂದು ಡಾ. ಮಹಾಂತೇಶ್ ಬಿರಾದಾರ ಅವರು ತಿಳಿಸಿದರು.

**ಊಟಿಯ ತೀಟಕಲ್ಲಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ** ನಡೆದ ಜೀವನೋತ್ಸಾಹ ಶಿಬಿರದ ಎರಡನೆ ದಿನದ ಉಪನ್ಯಾಸದಲ್ಲಿ ಅವರು ನಾವು ವಾಸ್ತವ ಬದುಕಿನಿಂದ ದೂರ ಉಳಿಯದೆ ಜೀವನ ಪ್ರೀತಿಯನ್ನು ಕಂಡುಕೊಳ್ಳಬೇಕು, ಇಲ್ಲದಿದ್ದರೆ ಬದುಕಿನ ದಿವ್ಯಕ್ಷಣಗಳನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ. ಇಂದು ಬಹುತೇಕ ಜನರು ಒತ್ತಡದ ಜೀವನವನ್ನು ನಡೆಸುತ್ತಿದ್ದಾರೆ. ನಮ್ಮ ಅಶಿಸ್ತಿನ ಜೀವನವೇ ಅನಾರೋಗ್ಯಕ್ಕೆ ಕಾರಣವಾಗಿದೆ. ಆದ್ದರಿಂದ ನಿಯಮಿತ ಆಹಾರ ಮತ್ತು ವ್ಯಾಯಾಮದ ಮೂಲಕ ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಹತೋಟಿಗೆ ತರಬಹುದು. ನಮಗೆ ಆಹಾರ ಪದ್ಧತಿಯ ಅರಿವು ಮುಖ್ಯವಾಗಿ ಬೇಕಾಗಿದೆ, ನಮ್ಮ ಪರಿಸರದಲ್ಲೇ ಆಯಾ ಋತುವಿನಲ್ಲಿ ಸಿಗುವ ಹಣ್ಣು,

ತರಕಾರಿಗಳನ್ನೇ ನಾವು ಹೆಚ್ಚು ಬಳಸಬೇಕು. ನಮ್ಮ ದೇಶದಲ್ಲಿ ಮಾನಸಿಕ ರೋಗದಿಂದ ಬಳಲುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಆದ್ದರಿಂದ ನಾವು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡಲ್ಲಿ ಸಮಾಜದ ಆರೋಗ್ಯವು ಸುಧಾರಿಸುತ್ತದೆ ಎಂದು ತಿಳಿಸಿದರು.

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್‌ರವರು 'ನಿಶ್ಚಿಂತ ಜೀವನ' ಎಂಬ ವಿಷಯ ಕುರಿತು ಮಾತನಾಡುತ್ತಾ ಬದುಕೆಂದರೆ ಆಸೆಪಡುವುದಲ್ಲ, ಇರುವುದರಲ್ಲೆ ತೃಪ್ತಿಪಡುವುದು. ಬೇಕು ಬೇಕೆಂಬ ಲಾಲಸೆ ನಮ್ಮ ಚಿಂತೆಗೆ ಕಾರಣವಾಗುತ್ತದೆ, ಧನ ದಾಹದಿಂದಲೂ ಧನ ದಾರಿದ್ರ್ಯದಿಂದಲೂ ಚಿಂತೆ ಆವರಿಸುತ್ತದೆ. ಚಿಂತೆಗೆ ಹಲವು ಕಾರಣಗಳಿವೆ ಮುಖ್ಯವಾಗಿ ಮನಸ್ಸಿನಲ್ಲುಂಟಾಗುವ ಕ್ಲೇಶ, ಮತ್ಸರ, ಕಲಹ, ದ್ವೇಷ, ಸಂದೇಹ, ಸಾವಿನ ಭಯ ಹಾಗೂ ಕೆಲಸದ ಒತ್ತಡದಿಂದ ಚಿಂತೆ ನಮ್ಮನ್ನಾವರಿಸುತ್ತದೆ, ನಾವು ಇದರ ಮೂಲೋತ್ಪಾಟನೆ ಮಾಡಿ ಪರಿಹಾರ ಕಂಡುಕೊಳ್ಳಬೇಕಾಗಿದೆಯೇ ಹೊರತು ಚಿಂತೆ ಗೂಡಾಗಲು ಬಿಡಬಾರದು. ಚಿಂತೆಯಿಂದ ಮುಕ್ತರಾಗಬೇಕಾದರೆ ಸ್ಥಿತಪ್ರಜ್ಞತೆ, ಆರೋಗ್ಯದ ಬಗ್ಗೆ ಕಾಳಜಿ, ಸೌಂದರ್ಯ ಪ್ರಜ್ಞೆಯೊಂದಿಗೆ ಉತ್ತಮ ಅಭಿರುಚಿಗಳನ್ನು ಅಳವಡಿಸಿಕೊಳ್ಳಬೇಕು, ಸಜ್ಜನರ ಸಹವಾಸ, ಸೇವಾನಿಷ್ಠೆ, ಶಿಸ್ತು ಬದ್ಧ ಜೀವನ ಹಾಗೂ ಗುರಿ ಮತ್ತು ಮಾರ್ಗವನ್ನು ಕಂಡುಕೊಂಡರೆ ನಾವು ನಿಶ್ಚಿಂತ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ. ನಮ್ಮ ಜೀವನವನ್ನು ಹೇಗೆ ಹಸನುಗೊಳಿಸಿಕೊಳ್ಳಬೇಕು ಎಂದು ಚಿಂತಿಸಿದರೆ ನಿಶ್ಚಿಂತ ಜೀವನ ಎಲ್ಲರಿಗೂ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪ್ರೊ. ಕೃಷ್ಣೇಗೌಡರವರು 'ಬದುಕಿನಲ್ಲಿ ಹಾಸ್ಯ' ಎಂಬ ವಿಷಯ ಕುರಿತು ಮಾತನಾಡುತ್ತಾ ನಮಗೆ ದೊರೆತಿರುವ ಬದುಕು ಒಂದು ವರ ಎಂದು ಭಾವಿಸಿದರೆ ಅರ್ಥಪೂರ್ಣವಾದ ಜೀವನವನ್ನು ನಡೆಸಬಹುದು. ನಮ್ಮ ಸಮೃದ್ಧ ಬದುಕನ್ನು ನಾವು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ನಾವಾಡುವ ಮಾತು ಮತ್ತೊಬ್ಬರ ಮನಸ್ಸನ್ನು ಸಂತೋಷಪಡಿಸುವಂತಿರಬೇಕೆ ಹೊರತು ನೋವುಂಟು ಮಾಡಬಾರದು. ಬದುಕಿನ ಆನಂದವನ್ನು ಎಲ್ಲೋ ಹುಡುಕುವುದಲ್ಲ, ಅದು ನಮ್ಮೊಳಗೆ ಅಡಗಿದೆ, ನಾವು ಹೊರಗೆ ನಿಂತು ನೋಡಿಕೊಂಡಾಗ ನಮ್ಮ ಬದುಕು ಚೆನ್ನಾಗಿರುತ್ತದೆ, ಬದುಕನ್ನು ವಯಸ್ಸಿನಿಂದ ಅಳೆಯುವುದಲ್ಲ, ಸಂತೋಷದಿಂದ ಅಳೆಯಬೇಕು, ಪ್ರತಿಯೊಬ್ಬರು ಜೀವನದಲ್ಲಿ ಸಂತೋಷವಾಗಿರಬೇಕು, ನಮ್ಮ ಮಾತಿಗೆ ಮಂತ್ರ ಶಕ್ತಿಯಿದೆ ಎಂದು ತಿಳಿಸಿದರು.

## ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಉತ್ತರಪ್ರದೇಶದ ರಾಜ್ಯಪಾಲರ ಭೇಟಿ

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠಕ್ಕೆ ದಿನಾಂಕ 30.5.2022ರಂದು ಉತ್ತರಪ್ರದೇಶದ ಘನತೆವೆತ್ತ ರಾಜ್ಯಪಾಲರಾದ ಶ್ರೀಮತಿ ಆನಂದಿಬೆನ್ ಪಟೇಲ್‌ರವರು ಭೇಟಿ ನೀಡಿದರು.

ಶ್ರೀಮಠಕ್ಕೆ ಆಗಮಿಸಿದ ರಾಜ್ಯಪಾಲರಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ನಂತರ ನಂದಿಧ್ವಜಕ್ಕೆ ಪೂಜೆ ಸಲ್ಲಿಸಿ ಪೂಜಾಕುಣಿತ, ಬ್ಯಾಂಡ್‌ವಾದನ, ವೀರಗಾಸೆ, ಕಂಸಾಳೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳ ಪ್ರದರ್ಶನವನ್ನು ವೀಕ್ಷಿಸಿದರು. ನಂತರ ಪರಮಪೂಜ್ಯ ಜಗದ್ಗುರುಗಳವ ಆಶೀರ್ವಾದ ಪಡೆದು ಪೂಜ್ಯರೊಂದಿಗೆ ಪ್ರಸ್ತುತ ವಿದ್ಯಮಾನಗಳ ಕುರಿತು ಸಮಾಲೋಚಿಸಿದರು. ಶ್ರೀಮಠದ ಸೇವಾ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

**ಮಾಸಿಕ ಸಾಮೂಹಿಕ ವಿವಾಹ – 2022**
**ಸುತ್ತೂರು ಶ್ರೀಕ್ಷೇತ್ರ**
**ಜುಲೈ 31, ಭಾನುವಾರ**
**ವಿವರಗಳಿಗೆ ಸಂಪರ್ಕಿಸಿ:**
**ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು, ದೂರವಾಣಿ : 08221–232223, 232224**

## ಪ್ರಕೃತಿ ನಮಗೆ ಅರಿವಿರದ ಹಲವು ವಿಸ್ಮಯಗಳನ್ನು ಒಳಗೊಂಡಿದೆ



ಅಭಿವೃದ್ಧಿಯ ಹೆಸರಿನಲ್ಲಿ ಮಾನವ ಕಾಡನ್ನು ನಾಶ ಮಾಡುತ್ತಿದ್ದಾನೆ ಹಾಗೇ ವನ್ಯಜೀವಿಗಳಿಗೆ ತೊಂದರೆಯನ್ನುಂಟು ಮಾಡುತ್ತಿದ್ದಾನೆ ಎಂದು ಪರಿಸರವಾದಿಗಳಾದ ಡಾ. ಸಂಜಯ್ ಗುಬ್ಬಿರವರು ಹೇಳಿದರು.

**ಊಟಿಯ ತೀಟಕಲ್ಲಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ** ನಡೆದ ಜೀವನೋತ್ಸಾಹ ಶಿಬಿರದ ನಾಲ್ಕನೇ ದಿನದ ಉಪನ್ಯಾಸದಲ್ಲಿ ಅವರು ಮಾತನಾಡುತ್ತಾ ಪ್ರಾಣಿಗಳು ಮನುಷ್ಯನಂತೆ ಅಭ್ಯಾಸ ಜೀವಿಗಳು, ಮನುಷ್ಯನಂತೆ ಸಂಘಜೀವಿಗಳು ಕೂಡ. ಅವುಗಳಲ್ಲೂ ಬೇರೆ ಪ್ರಾಣಿಗಳನ್ನು ಕಂಡರೆ ಅಸೂಯೆ ಪಡುವ ಬುದ್ಧಿ ಇರುತ್ತದೆ. ಪ್ರಕೃತಿ ನಮಗೆ ಅರಿವಿರದ ಹಲವು ವಿಸ್ಮಯಗಳನ್ನು ಒಳಗೊಂಡಿದೆ. ನಮ್ಮ ನಿತ್ಯಜೀವನದಲ್ಲಿ ಪ್ರಕೃತಿಯನ್ನು ಆರಾಧಿಸುವುದನ್ನು ಬಿಟ್ಟು ಸ್ವಾರ್ಥದಿಂದ ಭೋಗಿಸುತ್ತಿದ್ದೇವೆ. ಇದರಿಂದ ಮನುಕುಲ ಅವನತಿಯತ್ತ ಸಾಗುತ್ತಿದೆ. ಕಾಡುಗಳು ವನ್ಯಜೀವಿಗಳಿಗೆ ಮಾತ್ರ ಅನುಕೂಲವಲ್ಲ ಮನುಷ್ಯನಿಗೂ ಬಹು ಉಪಯೋಗಿ, ಅರಣ್ಯ ಸಕಲ ಜೀವರಾಶಿಗಳನ್ನು ಕಾಪಾಡುತ್ತದೆ. ಆದ್ದರಿಂದ ಮನುಷ್ಯ ಇದನ್ನು ದೇಶದ ಸಂಪತ್ತು ಎಂದು ಭಾವಿಸಿ ಬದುಕಬೇಕಾಗಿದೆ ಎಂದು ತಿಳಿಸಿದರು.

ಶ್ರೀಮತಿ ಆರತಿ ಬಾಲಸುಬ್ರಮಣ್ಯಂರವರು ಕೌಟುಂಬಿಕ ಮೌಲ್ಯಗಳು ಎಂಬ ವಿಷಯ ಕುರಿತು ಉಪನ್ಯಾಸ ನೀಡುತ್ತಾ ಕುಟುಂಬ ಸುಂದರವಾಗಿರಬೇಕೆಂದರೆ ಕುಟುಂಬದ ಸದಸ್ಯರಲ್ಲಿ ಸಂಸ್ಕಾರವಿರಬೇಕು. ನಮ್ಮೊಳಗಿರುವ ಕಹಿಯನ್ನು ಹೋಗಲಾಡಿಸಿಕೊಂಡರೆ ಕುಟುಂಬ ಸೌಖ್ಯವಾಗಿರುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಕುಟುಂಬಕ್ಕೆ ಹೆಚ್ಚು ಆದ್ಯತೆಯನ್ನು ನೀಡಲಾಗಿದೆ. ಕುಟುಂಬದ ಹಿರಿಯ ಸದಸ್ಯರು ಮೌಲ್ಯಗಳನ್ನು ಹೊಂದಿದ್ದರೆ ಮಕ್ಕಳು ಅವರನ್ನು ನೋಡಿ ಕಲಿಯುತ್ತಾರೆ. ಉತ್ತಮ ನಾಗರೀಕರಾಗಬೇಕಾದರೆ ಕುಟುಂಬದ ಪಾತ್ರ ಬಹುಮುಖ್ಯವಾಗಿರುತ್ತದೆ. ಮೌಲ್ಯಗಳು ನಾವಾಡುವ ಮಾತಿನಲ್ಲಿ, ಬದುಕುವ ರೀತಿಯಲ್ಲಿ ಇರುತ್ತವೆ, ದೇವರು ಹೊರಗೆಲ್ಲೂ ಇಲ್ಲ ನಮ್ಮೊಳಗೆಯೇ ಇದ್ದಾನೆ, ಮಾತಿನಲ್ಲಿ ಸರಸ್ವತಿಯಿದ್ದಾಳೆ, ನೋಡುವ ದೃಷ್ಟಿಯಲ್ಲಿ ಶಿವನಿದ್ದಾನೆ. ಅದನ್ನು ಅರಿಯಬೇಕಾದರೆ ನಮಗೆ ಸಂಸ್ಕಾರ ಬೇಕಾಗುತ್ತದೆ ಎಂದು ತಿಳಿಸಿದರು.

ಪ್ರೊ. ಮೈಸೂರು ಕೃಷ್ಣಮೂರ್ತಿರವರು ಜಾನಪದ ಸಂಸ್ಕೃತಿ ಎಂಬ ವಿಷಯ ಕುರಿತು ಉಪನ್ಯಾಸ ನೀಡುತ್ತಾ ಪರರು ಬದುಕಬೇಕು, ಪರರ ಹಸಿವು ಅಡಗಬೇಕು ಇದು ಜನಪದ ಸಂಸ್ಕೃತಿ. ಸಂಸ್ಕೃತಿಯಲ್ಲಿ ಎರಡು ರೀತಿ ಇರುವುದನ್ನು ಕಾಣಬಹುದು, ಒಂದು ಶಿಷ್ಟ ಸಂಸ್ಕೃತಿ ಇದನ್ನು ನಾಗರಿಕ ಸಂಸ್ಕೃತಿ ಎನ್ನಬಹುದು. ಮತ್ತೊಂದು ಜನಪದ ಸಂಸ್ಕೃತಿ ಇದನ್ನು ಅನಕ್ಷರಸ್ಥ ಸಮುದಾಯ ಕಟ್ಟಿ ಬೆಳೆಸಿದ ಸಂಸ್ಕೃತಿ ಎನ್ನಬಹುದು. ಜನಪದರಿಗೆ ಅಕ್ಷರ ಜ್ಞಾನವಿಲ್ಲದಿದ್ದರೂ, ಅವರದೇ ಆದ ಕೃಷಿ ಪದ್ಧತಿ, ಸಾಹಿತ್ಯ, ನೃತ್ಯ, ಆರೋಗ್ಯ, ಶಿಲ್ಪಕಲೆ ಮುಂತಾದವುಗಳ ಅರಿವಿದೆ. ಜನಪದ ಸಂಸ್ಕೃತಿ ಹಾಗೂ ಶಿಷ್ಟ ಸಂಸ್ಕೃತಿಯೊಳಗೆ ಪರಸ್ಪರ ಸ್ಪರ್ಷಿಸುವ ಹಾಗೂ ಘರ್ಷಿಸುವ ಕ್ರಿಯೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಅಕ್ಷರ ಸಂಸ್ಕೃತಿಯು ಜನಪದ ಸಂಸ್ಕೃತಿಯನ್ನು ವಿರೋಧಿಸುತ್ತಾ ಬಂದಿದ್ದು ಆನಂತರದಲ್ಲಿ

ಜನಪದ ಸಂಸ್ಕೃತಿಯನ್ನು ಒಂದು ಅಧ್ಯಯನವನ್ನಾಗಿ ಸಂಶೋಧನೆಗೆ ಒಳಪಡಿಸಿದ ನಂತರ ಅದರ ಮಹತ್ವದ ಅರಿವು ಉಂಟಾಯಿತು ಎಂದು ತಿಳಿಸಿದರು.

ಸಂಜೆ ಪ್ರಾರ್ಥನೆ ನಂತರ ರಾಮನಗರ ಜಿಲ್ಲೆ ಹಲಸೂರು ಗ್ರಾಮದ ಕು. ಎಸ್. ನಿಖಿತಾರವರಿಂದ ಯೋಗಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

## ಶರಣರ ವಚನಗಳು ಸಾಧನೆಗೆ ಚೈತನ್ಯ ಹಾಗೂ ಪ್ರೇರಣೆಯನ್ನು ನೀಡುತ್ತವೆ

ಶರಣರ ವಚನಗಳಲ್ಲಿ ಜೀವನ ದರ್ಶನವಿದೆ, ಈ ವಚನಗಳು ನಮ್ಮ ಸಾಧನೆಗೆ ಚೈತನ್ಯ ನೀಡುತ್ತದೆ ಎಂದು ಶಿವಮೊಗ್ಗ ಬಸವ ಕೇಂದ್ರದ ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳವರು ಹೇಳಿದರು.

**ಊಟಿಯ ತೀಟಕಲ್ಲಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ** ನಡೆದ ಜೀವನೋತ್ಸಾಹ ಶಿಬಿರದ ಐದನೇ ದಿನದ ಉಪನ್ಯಾಸದಲ್ಲಿ ಶರಣರ ಜೀವನ ಎಂಬ ವಿಷಯ ಕುರಿತು ಅವರು ಮಾತನಾಡುತ್ತಾ ಶರಣರ ಮಾತುಗಳಲ್ಲಿ ಜ್ಞಾನದ ಬೆಳಕನ್ನು ಕಾಣಬಹುದು. ಉತ್ಕೃಷ್ಟ ಜೀವನ ನಡೆಸಿದ ಶರಣರ ವಚನಗಳು ನಮ್ಮ ಸಾಧನೆಗೆ ಚೈತನ್ಯ ಹಾಗೂ ಪ್ರೇರಣೆಯನ್ನು ನೀಡುತ್ತವೆ. ನಮ್ಮ ಜೀವನವನ್ನು ಪರಿವರ್ತಿಸುವುದರೊಂದಿಗೆ ನಾವು ಕ್ರಮಿಸುವ ಮಾರ್ಗವನ್ನು ಸುಲಭಗೊಳಿಸುತ್ತವೆ. ನಮ್ಮ ಆಂತರ್ಯ ಹಾಗೂ ಬಾಹ್ಯದಿಂದ ಎದುರಾಗುವ ಅಡೆತಡೆಗಳಿಗೆ ಶರಣರ ಜೀವನವೇ ದಾರಿದೀಪ. ಅವರು ಎಂದೂ ನಕಾರಾತ್ಮಕವಾಗಿ ಯೋಚಿಸಲಿಲ್ಲ. ಒಳಿತು ಕೆಡುಕೆಂಬುದು ನಮ್ಮೊಳಗೆ ನಡೆಯುವ ಕ್ರಿಯೆ, ಮನುಷ್ಯ ಎರಡೂ ಗುಣಗಳನ್ನು ಹೊಂದಿರುತ್ತಾನೆ, ಯಾವ ಗುಣಗಳಿಗೆ ಅರಿವಿನ ನೀರೆರೆದು ಪೋಷಿಸುತ್ತಾನೋ ಅದು ಬೆಳೆಯುತ್ತದೆ. ಆ ಮೂಲಕ ಸಮಾಜ ಅವನನ್ನು ಪುರಸ್ಕರಿಸಬೇಕೊ ಅಥವಾ ತಿರಸ್ಕರಿಸಬೇಕೊ ಎನ್ನುವುದನ್ನು ನಿರ್ಧರಿಸುತ್ತದೆ. ನಿಜವಾದ ಶರಣನಾಗಬೇಕೆಂದರೆ ವೃತ್ತಿ ಜ್ಞಾನ ಅಳಿದು ಹೋಗಬೇಕು. ಆಗ ನಾನು ಯಾರು ಎನ್ನುವುದು ಅವನಿಗೆ ತಿಳಿಯುತ್ತದೆ, ಆತನೆ ನಿಜ ಶರಣನಾಗುತ್ತಾನೆ ಎಂದು ತಿಳಿಸಿದರು.

ಮೈಸೂರಿನ ಶ್ರೀ ಚಿನ್ಮಯ ಮಿಷನ್ನಿನ ಶ್ರೀ ದತ್ತಪಾದಾನಂದ ಸ್ವಾಮಿಗಳು ಬದುಕಿಗೊಂದು ಗುರಿ ಎಂಬ ವಿಷಯ ಕುರಿತು ಮಾತನಾಡುತ್ತಾ ಸತ್ಸಂಗದಿಂದ ನಮ್ಮ ಅಜ್ಞಾನ ನಾಶವಾಗುತ್ತದೆ. ನಮ್ಮ ಬದುಕಿನ ಗುರಿಯ ಬಗ್ಗೆ ತಿಳಿಯಬೇಕೆಂದರೆ ಈ ಜೀವ, ಜೀವನ ಯಾಕಾಗಿ ಇದೆ ಎಂದು ಮೂಲಭೂತವಾದ ಪ್ರಶ್ನೆಗಳನ್ನು ಹಾಕಿಕೊಂಡರೆ ಬದುಕಿನ ಗುರಿ ಅರ್ಥವಾಗುತ್ತದೆ. ನಮ್ಮ ಶರೀರವನ್ನು ಪರೋಪಕಾರಕ್ಕಾಗಿ ದುಡಿಸಿಕೊಳ್ಳುವುದೇ ಗುರಿ. ನಾವು ಮಾಡುವ ಕಾರ್ಯದಲ್ಲಿ ಭಗವಂತನನ್ನು ಕಾಣಬೇಕು, ಇದನ್ನೇ ವಚನಕಾರರು ಕಾಯಕವೇ ಕೈಲಾಸ ಎಂದಿದ್ದಾರೆ. ಬದುಕಿನಲ್ಲಿ ತಾಪತ್ರಯಗಳು ಉಂಟಾಗುತ್ತವೆ ಎನ್ನುತ್ತಾರೆ. ತಾಪತ್ರಯಗಳಲ್ಲಿ ಆದಿ ದೈವಿಕ, ಆದಿ ಭೌದ್ಧಿಕ ಹಾಗೂ ಆಧ್ಯಾತ್ಮಿಕ ಎಂಬ ಮೂರು ರೀತಿಯ ತೊಂದರೆಗಳನ್ನು ಕಾಣಬಹುದು. ಈ ತಾಪತ್ರಯಗಳು ನಮ್ಮನ್ನು ಹರಿತಗೊಳಿಸುವುದಕ್ಕಾಗಿ ಬರುತ್ತವೆ. ಇವುಗಳಿಂದ ಮುಕ್ತವಾಗಲು ಸತ್ಸಂಗ ಹಾಗೂ ಗುರುಗಳ ಮಾರ್ಗದರ್ಶನ ಬೇಕಾಗುತ್ತದೆ ಎಂದು ತಿಳಿಸಿದರು.

ಮೈಸೂರಿನ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಟ್ರಸ್ಟಿಗಳಾದ ಶ್ರೀ ಜಿ. ನಂಜುಂಡಸ್ವಾಮಿರವರು ಯೋಗ–ಧ್ಯಾನ ಎಂಬ ವಿಷಯ ಕುರಿತು ಮಾತನಾಡುತ್ತಾ ಯೋಗ–ಧ್ಯಾನ ಇವುಗಳನ್ನು ನಮ್ಮ ಬದುಕಿನ ಭಾಗವಾಗಿಸಿಕೊಳ್ಳಬೇಕು. ಪ್ರಾಚೀನ ಭಾರತದಲ್ಲಿ ಹುಟ್ಟಿ ಬೆಳೆದ ಯೋಗವು ಪ್ರಪಂಚಕ್ಕೆ ಋಷಿಗಳು ನೀಡಿದ ವಿಜ್ಞಾನವಾಗಿದೆ, ದೈಹಿಕ ಮಾನಸಿಕ ಪ್ರಕಾರದ ಶಿಸ್ತುಗಳು ಹಾಗೂ ಅಭ್ಯಾಸಗಳ ಒಂದು ಗುಂಪನ್ನು ಯೋಗ ಎಂದು ಕರೆಯಲಾಗಿದೆ. ಯೋಗವು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಹಾಗೂ ಸಮಾಧಿ ಎಂಬ ಎಂಟು ಅಂಗಗಳನ್ನು ಹೊಂದಿದೆ, ಇದನ್ನು ಅಷ್ಟಾಂಗ ಯೋಗ ಎನ್ನುವರು. ಯೋಗಗಳಲ್ಲಿ ಜ್ಞಾನ ಯೋಗ, ಭಕ್ತಿ ಯೋಗ, ಕರ್ಮ ಯೋಗ ಹಾಗೂ ರಾಜ ಯೋಗಗಳೆಂಬ ನಾಲ್ಕು ವಿಧಗಳಿವೆ. ಯೋಗದಿಂದ ಮಾನವನ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಶರೀರದಲ್ಲಿ

ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ದೇಹದ ಹಲವು ಕಾಯಿಲೆಗಳು ಗುಣವಾಗುತ್ತವೆ. ಧ್ಯಾನದಿಂದ ಮನಸ್ಸು ಪ್ರಶಾಂತವಾಗುತ್ತದೆ. ಇದರಿಂದ ನಮ್ಮ ಮನಸ್ಸಿನಲ್ಲಿರುವ ಋಣಾತ್ಮಕ ಭಾವನೆಗಳು ಅಳಿದು ಧನಾತ್ಮಕ ಭಾವನೆಗಳು ಬೆಳೆಯುತ್ತವೆ. ಮಾನಸಿಕ ಸ್ಥಿರತೆ ಹಾಗೂ ಏಕಾಗ್ರತೆಯು ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಕಡೂರು ತಾಲೂಕಿನ ಚಟ್ನಳ್ಳಿ ಮಹೇಶ್‌ರವರು ಶರಣರು ಹಾಗೂ ಜನಪದರ ಮೌಲ್ಯಗಳು ಎಂಬ ವಿಷಯ ಕುರಿತು ಮಾತನಾಡುತ್ತಾ ವಚನಕಾರರು ಬದುಕಿನ ಎಲ್ಲಾ ಆಯಾಮಕ್ಕೆ ಸಂಬಂಧಪಟ್ಟ ವಿಚಾರಗಳನ್ನು ತಿಳಿಸಿದ್ದಾರೆ. ಜಗತ್ತಿನ ಇತಿಹಾಸದಲ್ಲಿ ಮೊಟ್ಟಮೊದಲು ಸಮಾನತೆ ಹಾಗೂ ಕಾಯಕ ತತ್ವವನ್ನು ತಿಳಿಸಿದವರು ಶರಣರು. ಮಹಿಳಾ ಸಾಹಿತ್ಯ ರೂಪುಗೊಂಡಿದ್ದೇ ಕರ್ನಾಟಕದಲ್ಲಿ. ಅದು ಹನ್ನೆರಡನೆ ಶತಮಾನದ ಶಿವಶರಣೆಯರ ಮೂಲಕ. ಹಾಗೆಯೇ ಜನಪದರು ಬದುಕನ್ನು ಸಹಜವಾಗಿಯೇ ಸ್ವೀಕರಿಸಿದ್ದವರು. ಯಾವುದೇ ಆಡಂಬರವಿಲ್ಲದೆ ಜೀವನವನ್ನು ಕಟ್ಟಿಕೊಂಡಿದ್ದರು. ಇಂದಿನ ನಾಗರಿಕ ಸಂಸ್ಕೃತಿ ವಚನಕಾರರ ವಿಚಾರವನ್ನಾಗಲಿ, ಜನಪದರ ನಡೆಯನ್ನಾಗಲಿ ಅನುಸರಿಸುತ್ತಿಲ್ಲ ಎನ್ನುವುದು ಬೇಸರದ ಸಂಗತಿ. ಶರಣರು ನುಡಿದಂತೆ ನಡೆದವರು, ಜನಪದರು ನಡೆದಂತೆ ನುಡಿದವರು. ದೇವರ ಕಲ್ಪನೆಯನ್ನು ಶರಣರು, ಜನಪದರು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ಉಸಿರಿದ್ದರೆ ಶಿವ ಉಸಿರೋದರೆ ಶವ ಎಂದು ಜನಪದರು ದೇವರ ಕಲ್ಪನೆ ಬಗ್ಗೆ ಹೇಳಿದರೆ, ಇಡೀ ಬ್ರಹ್ಮಾಂಡವೆ ಶಿವ ಸ್ವರೂಪಿ ಎಂದು ವಚನಕಾರರು ಅಪ್ಪಣೆ ಕೊಡಿಸಿದ್ದಾರೆ ಎಂದರು. ☐

## ಭಾರತೀಯ ಸಂಸ್ಕೃತಿ ತ್ಯಾಗದ ತಳಹದಿಯ ಮೇಲೆ ನಿಂತಿದೆ



ಭಾರತೀಯ ಸಂಸ್ಕೃತಿ ವಿಶ್ವದ ಎಲ್ಲಾ ಸಂಸ್ಕೃತಿಗಳ ಮೇಲೆ ತನ್ನ ಪ್ರಭಾವ ಬೀರಿದೆ. ಈ ಸಂಸ್ಕೃತಿಯು ತ್ಯಾಗದ ತಳಹದಿಯ ಮೇಲೆ ನಿಂತಿದೆ ಎಂದು ತುಮಕೂರಿನ ಶ್ರೀ ಎಸ್. ರೇಣುಕಾರಾಧ್ಯರವರು ಹೇಳಿದರು.

**ಊಟಿಯ ತೀಟಕಲ್ಲಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ** ನಡೆದ ಜೀವನೋತ್ಸಾಹ ಶಿಬಿರದ ಆರನೇ ದಿನದ ಉಪನ್ಯಾಸದಲ್ಲಿ ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ ಎಂಬ ವಿಷಯ ಕುರಿತು ಮಾತನಾಡುತ್ತಾ ಪುರಾತನ ಇತಿಹಾಸ, ಅನನ್ಯ ಭೌಗೋಳಿಕ ರಚನೆ, ವೈವಿಧ್ಯಮಯ ಜನ ಸಮುದಾಯ, ವಿಭಿನ್ನ ಸಂಪ್ರದಾಯಗಳು ಮತ್ತು ಆಚರಣೆಗಳು, ಪ್ರಾಚೀನ ಪರಂಪರೆ ಹಾಗೂ ನೆರೆಹೊರೆ ರಾಷ್ಟ್ರಗಳ ಪ್ರಭಾವಗಳು ಭಾರತೀಯ ಸಂಸ್ಕೃತಿಯನ್ನು ರೂಪಿಸಿವೆ. ಸಿಂಧೂ ಕಣಿವೆ ನಾಗರಿಕತೆಯಿಂದ ಆರಂಭಗೊಂಡ ಭಾರತೀಯ ಸಂಸ್ಕೃತಿ ವೇದಗಳ ಕಾಲದಲ್ಲಿ ಅಸಾಧಾರಣ ವಿಕಸನ ಕಂಡಿತು. ಇದಾದ ನಂತರ ಬೌದ್ಧ ಧರ್ಮದ ಉನ್ನತಿ ಮತ್ತು ಅವನತಿ, ಸುವರ್ಣಯುಗ, ಮುಸ್ಲಿಂ ಆಳ್ವಿಕೆಗೆ ಭಾರತ ಅಧೀನವಾದದ್ದು ಹಾಗೂ ಯುರೋಪಿಯನ್ನರ ವಸಾಹತು ಆಳ್ವಿಕೆ ಸಂದರ್ಭದಲ್ಲಿ ಈ ವಿಕಸನ ಮತ್ತಷ್ಟು ವೈವಿಧ್ಯಮಯವಾಯಿತು. ಭಾರತದ ಶ್ರೇಷ್ಠ ಧಾರ್ಮಿಕ ಆಚರಣೆಗಳು, ಭಾಷೆಗಳು, ಪದ್ಧತಿ ಮತ್ತು ಸಂಪ್ರದಾಯಗಳು ಇದರ ಅನನ್ಯತೆಗೆ ಸಾಕ್ಷಿಯಾಗಿದೆ. ಭಾರತೀಯ ಸಂಸ್ಕೃತಿ ತ್ಯಾಗದ ತಳಹದಿಯ ಮೇಲೆ ನಿಂತಿದೆ. ಇಲ್ಲಿಯ ಮಾನವ ಸಂಬಂಧ ಅತ್ಯಂತ ಶ್ರೇಷ್ಠವೆಂದು ಭಾವಿಸಲಾಗಿದೆ. ಭೂಮಿಯನ್ನು ದೇವ ಮಂದಿರವೆಂದು ಪೂಜಿಸುವ ರೈತ ಸಂಸ್ಕೃತಿ ನಮ್ಮದು ಎಂದು ತಿಳಿಸಿದರು.

ಊಟಿಯ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ರಾಘವೇಶಾನಂದಜೀ ಮಹಾರಾಜ್‌ರವರು ವೈರಾಗ್ಯನಿಧಿ

ಅಕ್ಕಮಹಾದೇವಿ ಎಂಬ ವಿಷಯ ಕುರಿತು ಮಾತನಾಡುತ್ತಾ ಹನ್ನೆರಡನೇ ಶತಮಾನದ ಶಿವಶರಣೆಯರಲ್ಲಿ ಅಕ್ಕ ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲುತ್ತಾಳೆ. ಈಕೆ ಅನುಭವ ಮಂಟಪದ ಪ್ರಥಮ ಮಹಿಳಾ ಪ್ರತಿನಿಧಿಯಾಗಿದ್ದಳು. ಈಕೆ ಮಹಿಳೆಯರ ಸ್ಫೂರ್ತಿಯ ಚಿಲುಮೆ. ಅಕ್ಕ ಚಳುವಳಿಯ ಇತರೆ ಶಿವಶರಣರಿಗಿಂತ ತುಲನಾತ್ಮಕವಾಗಿ ಕಡಿಮೆ ವಚನಗಳನ್ನು ರಚಿಸಿದ್ದರೂ ಬಸವಣ್ಣ, ಅಲ್ಲಮಪ್ರಭು ಮತ್ತು ಸಿದ್ಧರಾಮರಂತಹ ಮಹಾನ್ ಶರಣರಿಂದ ಅಕ್ಕ ಮಹಾದೇವಿಯು ಹಿರಿಯ ಸಹೋದರಿ ಎಂದು ಗೌರವಿಸಲ್ಪಟ್ಟಿದ್ದಾಳೆ. ಅನುಭವ ಮಂಟಪದಲ್ಲಿ ನಡೆದ ಆಧ್ಯಾತ್ಮಿಕ ಚರ್ಚೆಗಳಲ್ಲಿ ಆಕೆಯ ಕೊಡುಗೆ ಮಹತ್ತರವಾದದ್ದು. ಮಹಾದೇವಿ ಅಕ್ಕ ಕನ್ನಡ ಸಾಹಿತ್ಯ ಮತ್ತು ಕರ್ನಾಟಕದ ಇತಿಹಾಸಕ್ಕೆ ಸ್ಫೂರ್ತಿದಾಯಕ ಮಹಿಳೆಯಾಗಿ ಕಾಣುತ್ತಾಳೆ. ಅಕ್ಕ ಚೆನ್ನಮಲ್ಲಿಕಾರ್ಜುನನ್ನು ತನ್ನ ಪತಿಯೆಂದು ಭಾವಿಸಿ ಆಧ್ಯಾತ್ಮದ ಉತ್ತುಂಗಕ್ಕೆ ಏರಿದ ವೀರ ವಿರಾಗಿಣಿ. ಅವಳು ಶಿವನನ್ನು ಕಾಣಲು ತನ್ನ ಹುಟ್ಟಿದ ಸ್ಥಳ ಮತ್ತು ಕುಟುಂಬವನ್ನು ತೊರೆದು ಕದಳಿ ವನದತ್ತ ನಡೆದ ಪರಿಗೆ ಅಕ್ಕನನ್ನು ವೈರಾಗ್ಯನಿಧಿಯೆಂದು ಭಾವಿಸಬಹುದು. ಅವಳು ಒಳಿತು ಕೆಡುಕು ಹಾಗೂ ಸ್ತುತಿ ಮತ್ತು ನಿಂದೆಗಳನ್ನು ಸಮಾನವಾಗಿ ಸ್ವೀಕರಿಸಿ ಸ್ಥಿತಪ್ರಜ್ಞತೆಯಿಂದಿರಲು ಕರೆಕೊಟ್ಟಿದ್ದಾಳೆ. ಹಾಗಾಗಿ ವೈರಾಗ್ಯದಿಂದ ಮಾತ್ರ ಯಾವ ಭಯವಿಲ್ಲದೆ ಬದುಕಲು ಸಾಧ್ಯವೆಂದು ತಿಳಿಸಿದರು.

### ಸಮಾರೋಪ

ಶಿಬಿರದ ಸಮಾರೋಪ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದಗಳೊಂದಿಗೆ ನಡೆಯಿತು. ಈ ಸಮಾರಂಭದಲ್ಲಿ ದಿವ್ಯಸಮ್ಮುಖವನ್ನು ವಹಿಸಿದ್ದ ಊಟಿಯ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ರಾಘವೇಶಾನಂದಜೀ ಮಹಾರಾಜ್‌ರವರು ಶ್ರೀಮಠವು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಇಂತಹ ಶ್ರೇಷ್ಠ ಕಾರ್ಯಗಳನ್ನು ಮಾಡುತ್ತಾ ಬಂದಿರುವ ಗುರು ಪರಂಪರೆಯನ್ನು ಸಮಾಜವು ಸ್ಮರಿಸಬೇಕು. ಊಟಿಯ ಈ ಜೀವನೋತ್ಸಾಹ ಶಿಬಿರ ಯಶಸ್ವಿಯಾಗಿದೆ ಎಂದು ಭಾವಿಸುತ್ತೇನೆ. ಪರಮಪೂಜ್ಯರು ಸಮಾಜದ ಮೇಲೆ ಇಷ್ಟೊಂದು ಕಾಳಜಿಯನ್ನು ಹೊಂದಿರುವುದನ್ನು ನೋಡಿದರೆ ನಮಗೆ ಅವರ ಮೇಲೆ ಇನ್ನೂ ಹೆಚ್ಚಿನ ಗೌರವ ಭಾವನೆ ಮೂಡುತ್ತದೆ. ಹೀಗೆ ಜಗದ್ಗುರುಗಳು ಇಂತಹ ಕಾರ್ಯಕ್ರಮಗಳ ಮೂಲಕ ಸಮಾಜದ ಜನರನ್ನು ಉದ್ಧರಿಸಬೇಕೆಂದು ಆಶಿಸುತ್ತೇವೆ ಎಂದು ತಿಳಿಸಿದರು.

ಶ್ರೀ ಪರಶಿವಮೂರ್ತಿಯವರು ಪ್ರಾರ್ಥಿಸಿದರು. ಶ್ರೀ ಎಚ್.ಎಸ್. ಸಿದ್ಧಮಲ್ಲಿಕಾರ್ಜನಸ್ವಾಮಿಯವರು ಸ್ವಾಗತಿಸಿದರು. 6 ದಿನಗಳ ಶಿಬಿರದ ವರದಿಯನ್ನು ಶ್ರೀ ಎಚ್.ಕೆ. ಬಸವಣ್ಣನವರು ಮಂಡಿಸಿದರು. ಶಿಬಿರಾರ್ಥಿಗಳಾದ ಪ್ರೊ. ಬಿ.ಕೆ. ಕಂಬಿ, ಶ್ರೀ ಶಿವಕುಮಾರಸ್ವಾಮಿ, ಶ್ರೀಮತಿ ಸುಮಂಗಲಮ್ಮ, ಶ್ರೀಮತಿ ಅಕ್ಕಮಹಾದೇವಿ ಹಿರೇಮಠ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಶಿಬಿರವು ಅತ್ಯುತ್ತಮವಾಗಿತ್ತು. ಪ್ರಾರ್ಥನೆ, ಯೋಗ, ದೇಸಿ ಆಟಗಳು, ಉಪನ್ಯಾಸ, ಪ್ರಸಾದ, ಪ್ರವಾಸ, ಸಮಯಪಾಲನೆ, ಸ್ವಚ್ಛತೆ, ಶಿಸ್ತು ಶಿಬಿರದಲ್ಲಿತ್ತು. ಶಿಬಿರದ ಸಂಚಾಲಕರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ಮಾತೃ ಹೃದಯದಿಂದ ನಡೆದುಕೊಂಡರು ಎಂದು ಸಂತೋಷ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಶ್ರೀ ಸೋಮಶೇಖರ ಬಸವರಾಜ ಮಗದುಂ ನಿರೂಪಿಸಿದರು. ಶ್ರೀ ವಿ.ಕೆ. ಶಿವಕುಮಾರ್‌ರವರು ವಂದಿಸಿದರು.

ಶಿಬಿರದಲ್ಲಿ ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ– ಧ್ಯಾನ ಹಾಗೂ ಸಂಜೆ ದೇಸಿ ಆಟಗಳ ವ್ಯವಸ್ಥೆ ಮಾಡಲಾಯಿತು, ಸುತ್ತೂರು ಶ್ರೀಮಠದ ಗುರುಪರಂಪರೆಯ ಕುರಿತ ಅನಿಮೇಷನ್ ಚಿತ್ರವನ್ನು ಪ್ರದರ್ಶಿಸಲಾಯಿತು.

ಶಿಬಿರದಲ್ಲಿ ಮೈಸೂರು, ಚಾಮರಾಜನಗರ, ಬೆಂಗಳೂರು, ತುಮಕೂರು, ಶಿವಮೊಗ್ಗ, ರಾಯಚೂರು, ಬಾಗಲಕೋಟೆ, ಗದಗ, ಬೆಳಗಾವಿ, ಗುಲ್ಬರ್ಗ, ಬೀದರ್ ಹಾಗೂ ವಿಜಯಪುರ ಜಿಲ್ಲೆಗಳಿಂದ 129 ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ಪ್ರತಿದಿನ ಸಂಜೆ ಪ್ರಾರ್ಥನೆ ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಸಂಶೋಧನೆಯೇ ಅಭಿವೃದ್ಧಿಯ ಕೀಲಿ ಕೈ

ಸಂಶೋಧನೆಯೇ ಅಭಿವೃದ್ಧಿಯ ಕೀಲಿ ಕೈ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷರಾದ ಪ್ರೊ. ಅನಿಲ್ ಡಿ. ಸಹಸ್ರಬುದ್ಧೆಯವರು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 2.5.2022ರಂದು ನಡೆದ **ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ** ನಾಲ್ಕನೆಯ ಘಟಿಕೋತ್ಸವದಲ್ಲಿ ಅವರು ಭಾಷಣ ಮಾಡುತ್ತಾ ಜಾಗತಿಕ ಮಟ್ಟದಲ್ಲಿ ಭಾರತ ಸೇವಾ ವಲಯದಲ್ಲಿ ಮಾತ್ರ ಮುಂಚೂಣಿಯಲ್ಲಿದ್ದರೆ ಸಾಲದು, ಉತ್ಪಾದನಾ ವಲಯದಲ್ಲೂ ಪ್ರಗತಿ ಸಾಧಿಸಬೇಕಿದೆ. ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಸೇವಾ ವಲಯದಲ್ಲೂ ಗಣನೀಯ ಪ್ರಗತಿ ಸಾಧಿಸಿದೆ. ಕೇಂದ್ರ ಸರ್ಕಾರ ಮೇಕ್ ಇನ್ ಇಂಡಿಯಾ ಮೂಲಕ ದೇಶದಲ್ಲಿ ಉತ್ಪಾದನೆ ಹೆಚ್ಚಿಸಲು ಉತ್ತೇಜನ ನೀಡಿದೆ. ಅನ್ವೇಷಣೆ ಮತ್ತು ಸಂಶೋಧನೆಯೇ ದೇಶದ ಅಭಿವೃದ್ಧಿಯ ಮಾರ್ಗಗಳು ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಪಿಎಚ್‌ಡಿ ಸೇರಿದಂತೆ ಒಟ್ಟು 1519 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಪದವೀಧರರಿಗೆ ಪ್ರಮಾಣ ವಚನ ಬೋಧಿಸಿದರು. ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರರಾದ ಪ್ರೊ. ಎಂ.ಎಚ್. ಧನಂಜಯ, ನಿರ್ದೇಶಕರಾದ ಡಾ. ಬಿ. ಸುರೇಶ್‌ರವರುಗಳು ಉಪಸ್ಥಿತರಿದ್ದರು. ಕುಲಪತಿಗಳಾದ ಪ್ರೊ. ಎ.ಎನ್. ಸಂತೋಷ್‌ಕುಮಾರ್ ಸ್ವಾಗತಿಸಿ, ವಿಶ್ವವಿದ್ಯಾನಿಲಯದ ವರದಿಯನ್ನು ಮಂಡಿಸಿದರು. ಕುಲಸಚಿವರಾದ ಡಾ. ಎಸ್.ಎ. ಧನರಾಜ್ ವಂದಿಸಿದರು. ಶ್ರೀಮತಿ ಶ್ರೀದೇವಿ ಕುಳೇನೂರ್ ಪ್ರಾರ್ಥಿಸಿದರು.

## ಸಮಸ್ಯೆ ಹೇಳುವವರಿಗಿಂತ ಪರಿಹಾರ ಕಂಡುಕೊಳ್ಳುವವರ ಸಂಖ್ಯೆ ಹೆಚ್ಚಬೇಕು

ಸಮಸ್ಯೆ ಹೇಳುವವರಿಗಿಂತ ಪರಿಹಾರ ಕಂಡುಹಿಡಿಯುವವರ ಸಂಖ್ಯೆ ಹೆಚ್ಚಬೇಕಿದೆ ಎಂದು ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್‌ನ ಸಹ–ಸಂಸ್ಥಾಪಕರು ಮತ್ತು ಅಧ್ಯಕ್ಷರು ಹಾಗೂ ಸೆಲ್ಕೋ ಫೌಂಡೇಶನ್ನಿನ ಪ್ರಧಾನ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಹರೀಶ್ ಹಂದೆಯವರು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ಅಂಗವಾಗಿ **ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ** ದಿನಾಂಕ 26.5.2022ರಂದು ನಡೆದ ದತ್ತಿಯ 11ನೇ ಉಪನ್ಯಾಸದಲ್ಲಿ ಬಡತನ ಮತ್ತು ಸುಸ್ಥಿರತೆ ವಿಷಯದ ಕುರಿತು ಮಾತನಾಡಿದರು. ಭಾರತದಲ್ಲಿ ಸಮಸ್ಯೆಗಳನ್ನು ಹುಡುಕವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆದರೆ ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಹಿಡಿಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ದೇಶದ ಸಮಸ್ಯೆಗಳನ್ನು ಕೇವಲ ವಿಮರ್ಶೆ ಮಾಡುತ್ತಾ ಸಮಯ ವ್ಯರ್ಥ ಮಾಡದೆ, ಅದನ್ನು ಸರಿ ಮಾಡುವುದರ ಬಗ್ಗೆ ಯೋಚಿಸಬೇಕಿದೆ ಮತ್ತು ಯೋಜಿಸಬೇಕಿದೆ. ಭಾರತೀಯರು ಪ್ರತಿಭಾವಂತರು, ಪ್ರತಿಯೊಬ್ಬರೂ ಬದಲಾವಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಿದೆ. ನಮ್ಮ ದೇಶದ ಪ್ರತಿಯೊಬ್ಬರಿಗೂ ಆ ಶಕ್ತಿ ಮತ್ತು ಸಾಮರ್ಥ್ಯಗಳಿವೆ. ಜಗತ್ತಿನ ಇತರ ದೇಶಗಳು ಹೊಂದಿರುವ ಸಮಸ್ಯೆಗಳನ್ನೇ ಭಾರತವೂ ಹೊಂದಿದೆ. ಪದವಿಗಳನ್ನು ತೆಗೆದುಕೊಂಡು ಕಛೇರಿಗಳಲ್ಲಿ ಕುಳಿತರೆ ಸಮಸ್ಯೆಗೆ ಪರಿಹಾರ ದೊರೆಯುವುದಿಲ್ಲ. ಕೋವಿಡ್ ಕೇವಲ ಕೆಲವರನ್ನು ಮಿಲೇನಿಯರನ್ನಾಗಿಸಿತು. ಆದರೆ ಸಾಕಷ್ಟು ಜನರನ್ನು ಬಡವರನ್ನಾಗಿಸಿತು. ಕೆಲವು ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಲಾಯಿತು. ಆದರೆ ರೈತರು, ರಸ್ತೆ ಬದಿ ವ್ಯಾಪಾರಿಗಳು ಮನೆಯಲ್ಲಿ ಕುಳಿತು ಕೆಲಸ ಮಾಡಲು ಸಾಧ್ಯವಿಲ್ಲ. ಶ್ರೀಮಂತ ವರ್ಗದವರು ಸಬ್ಸಿಡಿಯನ್ನು ಬಯಸುತ್ತಾರೆ. ಅವರು ಬಯಸುವ ಸಬ್ಸಿಡಿಯ ನಿಜವಾದ ಹೂಡಿಕೆದಾರರು ಬಡವರಾಗಿರುತ್ತಾರೆ. ಆದರೆ ನಮ್ಮ ಆಡಳಿತ ವ್ಯವಸ್ಥೆ

ಬಡತನಕ್ಕೆ ವಿರುದ್ಧವಾಗಿದೆ. ದೇಶದ ಬಗ್ಗೆ ಹೆಮ್ಮೆಯಿರಬೇಕು. ಬಡತನವನ್ನು ಹೇಗೆ ನಿವಾರಿಸಬೇಕು ಎಂದು ಯೋಚಿಸಬೇಕಿದೆ. ಯುವಕರು ಈ ನಿಟ್ಟಿನಲ್ಲಿ ದೃಢಸಂಕಲ್ಪ ಮಾಡಬೇಕು. ಭಾರತ ಈ ಬಗೆಯ ಸಂಶೋಧನೆಗೆ ಕೇಂದ್ರವಾಗಿದೆ ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿ ಭಾರತದಲ್ಲಿ ಎಲ್ಲ ಸಮಸ್ಯೆಗಳೂ ಇವೆ. ಅವಕ್ಕೆ ಪರಿಹಾರೋಪಾಯಗಳೂ ಸಹ ಇವೆ. ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಸಮಸ್ಯೆಗಳಿಗೆ ಹಿಂದೆ ಹಳ್ಳಿಗಳಲ್ಲಿ ಅಲ್ಲೇ ಪರಿಹಾರವನ್ನು ಕಂಡುಹಿಡಿಯಲಾಗುತ್ತಿತ್ತು. ಜನರಲ್ಲಿ ಸಾಮಾನ್ಯವಾದ ತಿಳುವಳಿಕೆ ಬರಬೇಕು. ಬಡತನ ಸುಸ್ಥಿರತೆಗೆ ಎಂದಿಗೂ ಅಡ್ಡಿ ಬರುವುದಿಲ್ಲ. ಮಾಡುವ ಕೆಲಸದಲ್ಲಿ ತಾರತಮ್ಯ ಭಾವನೆ ಇರಬಾರದು. ಸೇವೆ ಮುಖ್ಯವಾಗಬೇಕೆ ಹೊರತು ಹಣ ಮುಖ್ಯವಾಗಬಾರದು. ಕೋಟಿ ಹಣದ ಒಡೆಯರಾಗುವುದಕ್ಕಿಂತ ಕೋಟಿ ಜನಗಳ ಆಸ್ತಿಯಾಗಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳಾದ ಡಾ. ಬಗಾದಿ ಗೌತಮ್‌ರವರು ಸುತ್ತೂರು ಶ್ರೀಮಠ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಮಾಜಕ್ಕೆ ಪೂರಕವಾದ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಇಂದಿನ ಉಪನ್ಯಾಸದಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸದುಪಯೋಗವಾಗಲಿದೆ. ಬದುಕಿನಲ್ಲಿ ಉಂಟಾಗುವ ಸಮಸ್ಯೆಗಳಿಗೆ ಹತ್ತಿರದಲ್ಲಿಯೇ ಪರಿಹಾರವಿರುತ್ತದೆ ಎಂಬುದನ್ನು ನಾವೆಲ್ಲರೂ ಅರಿತು ನಡೆಯಬೇಕಿದೆ ಎಂದು ಹೇಳಿದರು.

ಶ್ರೀ ಎಂ ರವರ 10ನೇ ದತ್ತಿ ಉಪನ್ಯಾಸ ಸಾಧನಾ–ಪಾತ್ ಆಫ್ ಲಿಬರೇಷನ್ ಕೃತಿಯನ್ನು ವಿಡಬ್ಲ್ಯೂಎಫ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಆರ್. ಪೈರವರು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಸಂವಾದ ಕಾರ್ಯಕ್ರಮದಲ್ಲಿ ಶ್ರೋತೃಗಳ ಪ್ರಶ್ನೆಗಳಿಗೆ ಡಾ. ಹರೀಶ್ ಹಂದೆಯವರು ಉತ್ತರಿಸಿದರು. ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪ ಗುರುಪ್ರಸಾದ್ ಮತ್ತು ಶ್ರೀಮತಿ ಕೆ.ಜಿ. ವಿನುತರವರು ಪ್ರಾರ್ಥಿಸಿದರು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಸ್ವಾಗತಿಸಿದರು. ಶ್ರೀ ಆರ್. ಮಹೇಶ್ ವಂದಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಕಾರ್ಯಕ್ರಮ ನಿರೂಪಿಸಿದರು.

□

## ಸುತ್ತೂರು ಶ್ರೀಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸೇವೆಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಮೆಚ್ಚುಗೆ

ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಎನ್.ವಿ. ರಮಣರವರು ದಂಪತಿ ಸಮೇತರಾಗಿ ಮೈಸೂರು ಶ್ರೀ ಸುತ್ತೂರು ಮಠಕ್ಕೆ ದಿನಾಂಕ 29.5.2022ರಂದು ಭೇಟಿ ನೀಡಿ ಪೂಜ್ಯರ ದರ್ಶನಾಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ದೇಶದ ಯಾವುದೇ ಮೂಲೆಯ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಯಾವ ಅಡೆತಡೆಗಳಿಲ್ಲದೆ ಎಲ್ಲ ಸೌಲಭ್ಯಗಳು ದೊರೆಯಬೇಕು. ಹಾಗೆ ಆದಾಗ ಸಾಮಾನ್ಯರು ಸೌಲಭ್ಯಗಳಿಗಾಗಿಯೇ ನ್ಯಾಯಾಲಯಗಳನ್ನು ಮೊರೆ ಹೋಗುವುದು ತಪ್ಪುತ್ತದೆ ಎಂಬಿತ್ಯಾದಿ ವಿಷಯಗಳ ಬಗ್ಗೆ ಪರಮಪೂಜ್ಯರೊಂದಿಗೆ ಸಮಾಲೋಚಿಸಿದರು.

ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ರಾಜ್ಯ, ರಾಷ್ಟ್ರ ಹಾಗೂ ವಿದೇಶಗಳಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಸಲ್ಲಿಸುತ್ತಿರುವ ಸೇವೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಅಮೆರಿಕಕ್ಕೆ ಭೇಟಿ ನೀಡಿದಾಗ ಮೇರಿಲ್ಯಾಂಡ್‌ನಲ್ಲಿರುವ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಭೇಟಿ ನೀಡುವಂತೆ ಅವರನ್ನು ಆಹ್ವಾನಿಸಲಾಯಿತು.

## ಜ್ಞಾನವಾರಿಧಿ

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರತಿ ಸೋಮವಾರ ನಡೆಯುವ ಜ್ಞಾನವಾರಿಧಿ ಉಪನ್ಯಾಸದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಧರ್ಮ, ಅಧ್ಯಾತ್ಮ, ಯೋಗ, ಆರೋಗ್ಯ, ಜೀವನಶೈಲಿ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ಆನ್‌ಲೈನ್ ಮೂಲಕ ನಡೆಯುವ ಈ ಉಪನ್ಯಾಸ ಕಾರ್ಯಕ್ರಮವು ಸಾಕಷ್ಟು ಜನಪ್ರಿಯವಾಗಿದೆ. ಉಪನ್ಯಾಸದ ನಂತರ ವೀಕ್ಷಕರ ಆಯ್ದ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿದೆ.

ಆನ್‌ಲೈನ್ ಮೂಲಕ ನಡೆಯುವ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸುತ್ತಿದ್ದಾರೆ.

### ಆರೋಗ್ಯಯುತ ಜೀವನಶೈಲಿ ಅನುಸರಿಸಿ



ಉತ್ತಮವಾದ ಜೀವನ ಶೈಲಿಯ ಅನುಸರಣೆಯಿಂದ ಆರೋಗ್ಯಯುತ ಜೀವನವನ್ನು ಪಡೆಯಬಹುದು ಎಂದು ಮೈಸೂರಿನ ವೈದ್ಯರಾದ ಡಾ. ಎಂ. ಪ್ರೇಮನಾಥ್‌ರವರು ಹೇಳಿದರು.

ದಿನಾಂಕ 2.5.2022ರಂದು ನಡೆದ 'ಜ್ಞಾನವಾರಿಧಿ–74' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ರಕ್ತದ ಏರೊತ್ತಡ ಮತ್ತು ಸಲಹೆಗಳು ವಿಷಯ ಕುರಿತು ಉಪನ್ಯಾಸ ನೀಡುತ್ತಾ ರಕ್ತದ ಏರೊತ್ತಡ ಪ್ರಪಂಚದ ಎಲ್ಲ ಕಡೆ ಇರುವ ಅಪಾಯಕಾರಿ ಖಾಯಿಲೆ. ಭಾರತದಲ್ಲಿ 207 ಮಿಲಿಯನ್ ಜನರು ಇದರಿಂದ ಬಳಲುತ್ತಿದ್ದಾರೆ. ಇದು ಹೃದಯ ಮತ್ತು ಮೆದುಳಿಗೆ ಹಾನಿಯನ್ನುಂಟು ಮಾಡುತ್ತದೆ. ಆರಂಭದಲ್ಲಿ ರಕ್ತದ ಏರೊತ್ತಡಕ್ಕೆ ಯಾವುದೇ ಲಕ್ಷಣಗಳಿರುವುದಿಲ್ಲ. ದೇಹದ ವಿವಿಧ ಅಂಗಾಂಗಳ ಮೇಲೆ ಪರಿಣಾಮ ಬೀರಲು ಆರಂಭವಾದಾಗ ಇದರ ಅರಿವಾಗುತ್ತದೆ. ಇದನ್ನು ತಡೆಗಟ್ಟಲು ಜೀವನಶೈಲಿಯನ್ನು ಬದಲಾಯಿಸಿಕೊಳ್ಳುವುದು ಅತ್ಯಗತ್ಯ. ಹೃದಯಕ್ಕಿಂತ ಮೆದುಳಿಗೆ ಹೆಚ್ಚಿನ ಹಾನಿಯನ್ನುಂಟು ಮಾಡುತ್ತದೆ. ಧೂಮಪಾನ ಮತ್ತು ಮದ್ಯಪಾನವನ್ನು ತ್ಯಜಿಸಬೇಕು. ದೇಹದ ತೂಕ ನಿಯಂತ್ರಣದಲ್ಲಿರಬೇಕು. ಆಹಾರದಲ್ಲಿ ಉಪ್ಪಿನ ಪ್ರಮಾಣ ಕಡಿಮೆಯಿರಬೇಕು. ತೂಕ ಹೆಚ್ಚಿದರೆ ರಕ್ತದೊತ್ತಡವೂ ಹೆಚ್ಚುತ್ತದೆ. ಆಹಾರದಲ್ಲಿ ಕ್ಯಾಲ್ಸಿಯಂ, ಮೆಗ್ನೇಷಿಯಂ ಮತ್ತು ಪೊಟ್ಯಾಷಿಯಂ ಹೆಚ್ಚಾಗಿ ಇರುವಂತೆ ನೋಡಿಕೊಳ್ಳಬೇಕು. ಹಣ್ಣು, ತರಕಾರಿಗಳ ಸೇವನೆ, ನಿತ್ಯ ವ್ಯಾಯಾಮ, ನಡಿಗೆ, ಯೋಗ ಮಾಡುವುದು ಆರೋಗ್ಯಕ್ಕೆ ಉತ್ತಮ. ಕಾಫಿ–ಟೀಯ ಅತಿಯಾದ ಸೇವನೆಯು ಒಳ್ಳೆಯದಲ್ಲ. ಒತ್ತಡ ಮುಕ್ತ ಜೀವನಕ್ಕಾಗಿ ಧ್ಯಾನ, ಯೋಗವನ್ನು ರೂಢಿಸಿಕೊಳ್ಳಬೇಕು. ಬೇಗ ಕೋಪ ಬರುವುದಕ್ಕೂ ರಕ್ತದ ಏರೊತ್ತಡಕ್ಕೂ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಿದರು.

ಕು. ಭಾರತಿ ಹಾಗೂ ಕು. ಭಾನುಮತಿ ಪ್ರಾರ್ಥಿಸಿದರು. ಶ್ರೀ ಶಿವಸ್ವಾಮಿ ಕಾರ್ಯಕ್ರಮ ನಿರ್ವಹಿಸಿದರು.

## ಆಡಳಿತ ಎಂಬುದು ಸೇವೆ ಸಲ್ಲಿಸಲು ಇರುವ ಮಾರ್ಗ



ಆಡಳಿತ ಎಂದರೆ ಕೇವಲ ಅಧಿಕಾರ ಚಲಾಯಿಸುವುದಲ್ಲ. ಅದು ಜನರಿಗೆ ಸೇವೆ ಸಲ್ಲಿಸಲು ಇರುವ ಮಾರ್ಗ ಎಂದು ಪ್ರಾದೇಶಿಕ ಆಯುಕ್ತರ ಕಛೇರಿಯಲ್ಲಿ ಹೆಚ್ಚುವರಿ ಆಯುಕ್ತರಾಗಿರುವ ಶ್ರೀ ಪಿ. ಶಿವರಾಜುರವರು ಹೇಳಿದರು.

ದಿನಾಂಕ 9.5.2022 ರಂದು ನಡೆದ 'ಜ್ಞಾನವಾರಿಧಿ–75' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಆಡಳಿತದಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ದೂರದರ್ಶಿತ್ವ ಕುರಿತು ಉಪನ್ಯಾಸ ನೀಡುತ್ತಾ ಆಡಳಿತ ವ್ಯವಸ್ಥೆ ಎಂಬುದು ಮೊದಲು ಕುಟುಂಬದಿಂದಲೇ ಆರಂಭವಾಗುತ್ತದೆ. ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ, ದೇಶದಿಂದ ಅಂತಾರಾಷ್ಟ್ರೀಯ ಮಟ್ಟದವರೆಗೂ ಆಡಳಿತ ವ್ಯವಸ್ಥೆ ಇರುತ್ತದೆ. ಮನುಷ್ಯನ ವ್ಯಕ್ತಿತ್ವ ವಿಕಸನವಾದಂತೆಲ್ಲ ಆಡಳಿತ ಹೆಚ್ಚು ಪ್ರಖರತೆಗೆ ಬರುತ್ತದೆ. ಆಡಳಿತ ಎಂದರೆ ಸೇವೆ ಮೂಲಕ ಸೌಲಭ್ಯವನ್ನು ನೀಡುವುದು. ಜನರಿಗೆ ಆಡಳಿತದಲ್ಲಿ ನಂಬಿಕೆ ಬರಬೇಕು. ಆಡಳಿತದಲ್ಲಿ ಎಂದೂ ದರ್ಪಕ್ಕೆ ಅವಕಾಶವಿರಬಾರದು. ಸಮಷ್ಟಿ ಪ್ರಯತ್ನವಿರಬೇಕು. ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳ ಜೊತೆಗೆ ಸಾರ್ವಜನಿಕರ ಸಮಯೋಚಿತ ಭಾಗವಹಿಸುವಿಕೆಯು ಉತ್ತಮ ಆಡಳಿತವನ್ನು ನೀಡಲು ಸಾಧ್ಯವಾಗುತ್ತದೆ. ಅಸಹಾಯಕರ ಹಾಗೂ ತುಳಿತಕ್ಕೊಳಗಾದವರ ರಕ್ಷಣೆ, ಸಾಮಾಜಿಕ ಸಾಮರಸ್ಯ, ದೇಶದ ಹಿರಿಮೆ–ಗರಿಮೆಗಳನ್ನು ಎತ್ತಿ ಹಿಡಿಯುವುದು ಉತ್ತಮ ಆಡಳಿತಗಾರನ ಧ್ಯೇಯಗಳಾಗಿರಬೇಕು. ಸಾಮಾಜಿಕ ಬದ್ಧತೆ ಮತ್ತು ದೂರದರ್ಶಿತ್ವ ಇರಬೇಕು. ಮಾನವೀಯತೆ, ಶಿಸ್ತು, ಮಮತೆಗಳು ಆಡಳಿತದ ಭಾಗವಾಗಿರಬೇಕು. ಆಡಳಿತದ ಗುರಿ ಸಮಾಜದ ಕಟ್ಟಕಡೆಯ ವ್ಯಕ್ತಿಯು ಗೌರವಯುತವಾದ ಜೀವನ ನಡೆಸುವಂತಾಗಬೇಕು ಎಂದು ತಿಳಿಸಿದರು.

ಶ್ರೀಮತಿ ರೂಪಾ ಗುರುಪ್ರಸಾದ್ ಹಾಗೂ ಶ್ರೀಮತಿ ಸುಮಂಗಲಾ ಜಂಗಮಶೆಟ್ಟಿ ಪ್ರಾರ್ಥಿಸಿದರು. ಡಾ. ಪ್ರಭುಸ್ವಾಮಿ ಕಟ್ನವಾಡಿ ಕಾರ್ಯಕ್ರಮ ನಿರ್ವಹಿಸಿದರು.

## ಶಿವಾನುಭವ ದಾಸೋಹ

### ಧಾರ್ಮಿಕ ಜಾಗೃತಿ ಮೂಡಿಸಿದ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು ನಾಡಿನೆಲ್ಲೆಡೆ ಸಂಚರಿಸಿ ಜನರಲ್ಲಿ ಧಾರ್ಮಿಕ ಜಾಗೃತಿಯನ್ನು ಮೂಡಿಸಿ, ಜನರ ದುಃಖ ದುಮ್ಮಾನಗಳನ್ನು ಪರಿಹರಿಸಿದರು ಎಂದು ಹುಲಿಯೂರುದುರ್ಗದ ಶ್ರೀ ಸಿದ್ಧಗಂಗಾ ಮಠದ ನಿ.ಪ್ರ. ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ದಿನಾಂಕ 28.5.2022ರಂದು ಮೈಸೂರಿನ ಜೆಎಸ್‌ಎಸ್ ಬಡಾವಣೆಯ 2ನೇ ಹಂತದ ಶ್ರೀಮತಿ ಬಸಮ್ಮಣ್ಣಿ ಮತ್ತು ಶ್ರೀ ಸಿದ್ಧಲಿಂಗಸ್ವಾಮಿಯವರ ಸ್ವಗೃಹದಲ್ಲಿ ಆಯೋಜಿಸಿದ್ದ 289ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಶ್ರೀ ಸಿದ್ಧಲಿಂಗೇಶ್ವರರು ಚಾಮರಾಜನಗರದ ಹರದನಹಳ್ಳಿಯವರು, ಅವರು ಪಂಡಿತರೂ ಹೌದು. 701 ವಚನಗಳನ್ನು ರಚಿಸಿದ್ದಾರೆ. ಶಿವಯೋಗ ಸಂಪನ್ನರಾಗಿ ಸಮಾಜ ಸುಧಾರಕರಾಗಿದ್ದರೆಂದು ಹೇಳಿದರು.



ಮೈಸೂರಿನ ಜೆಎಸ್‌ಎಸ್ ಬಡಾವಣೆಯ ಶ್ರೀಮತಿ ಬಸಮ್ಮಣ್ಣಿ ಮತ್ತು ಶ್ರೀ ಸಿದ್ಧಲಿಂಗಸ್ವಾಮಿಯವರ ಸ್ವಗೃಹದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ಆಯೋಜಿಸಿದ್ದ 289ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ ಹುಲಿಯೂರುದುರ್ಗದ ಶ್ರೀ ಸಿದ್ಧಗಂಗಾ ಮಠದ ನಿ.ಪ್ರ. ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳು ಉಪನ್ಯಾಸ ನೀಡಿದರು. ರಾಮೇನಹಳ್ಳಿ ಮತ್ತು ವಾಟಾಳು ಶ್ರೀಗಳಿವರಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಷ.ಬ್ರ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಶರಣರ ತತ್ವಗಳನ್ನು ತಿಳಿದು ಅವುಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಿ ಜನರಲ್ಲಿ ಶರಣಸಂಸ್ಕೃತಿಯನ್ನು ಪಸರಿಸಿದರು ಎಂದು ತಿಳಿಸಿದರು.

ರಾಮೇನಹಳ್ಳಿ ಶ್ರೀಗಳು ಮಾತನಾಡುತ್ತಾ ಶಿವಶರಣರ ಪುಣ್ಯಕ್ಷೇತ್ರಗಳನ್ನು ದರ್ಶನ ಮಾಡಿ, ಅವರ ಆದರ್ಶಗಳನ್ನು ಪಾಲಿಸಬೇಕು ಎಂದು ಹೇಳಿದರು.

ಕು. ಯಶಸ್ವಿನಿ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಶ್ರೀ ಸಿದ್ಧಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀ ಸುನೀಲ್‌ಕುಮಾರ್ ವಂದನಾರ್ಪಣೆ ಮಾಡಿದರು. ಶ್ರೀಮತಿ ರಶ್ಮಿ ಕಾರ್ಯಕ್ರಮ ನಿರೂಪಿಸಿದರು.

## ಭಾರತೀಯ ಶಿಕ್ಷಣ ಮತ್ತು ಮೌಲ್ಯ ಪರಂಪರೆಯನ್ನು ಬೆಳೆಸುತ್ತಿರುವ ಜೆಎಸ್‌ಎಸ್

ನಮ್ಮ ಹಿರಿಯರು ಬದುಕಿನ ಹಲವು ಮೌಲ್ಯ ಪರಂಪರೆಯನ್ನು ಕಟ್ಟಿ, ನೋವು ನಲಿವುಗಳ ಬಗ್ಗೆ ತಿಳಿಸಿ ನಮಗೆ ದಾರಿದೀಪವಾಗಿದ್ದಾರೆ. ಇದನ್ನು ಅರಿತು ನಾವು ನಡೆಯಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಭಾರತೀಯ ಶಿಕ್ಷಣ ಮತ್ತು ಮೌಲ್ಯ ಪರಂಪರೆಯನ್ನು ಜಾಗೃತವಾಗಿ ಬೆಳೆಸುತ್ತಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಆರ್. ಶಿವಪ್ಪ ಅಭಿಪ್ರಾಯಪಟ್ಟರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ನಡೆದ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಕಾಲೇಜಿನ ದಿನಗಳು ಅಮೂಲ್ಯವಾದವು. ಮೌಲ್ಯಯುತವಾದ ಶಿಕ್ಷಣವನ್ನು ಪಡೆಯುವುದರ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಷೇತ್ರದಲ್ಲಿಯೂ ತೊಡಗಿಸಿಕೊಳ್ಳಬೇಕಾಗಿರುವುದು ಬಹಳ



ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಆರ್. ಶಿವಪ್ಪ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ನೆರವೇರಿಸಿದರು. ಮಹಾರಾಣಿ ವಾಣಿಜ್ಯ ಕಾಲೇಜಿನ ಕನ್ನಡ ಅಧ್ಯಾಪಕರಾದ ಪ್ರೊ. ಮೈಸೂರು ಕೃಷ್ಣಮೂರ್ತಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಮುಖ್ಯ. ಭಾರತದಲ್ಲಿ ಶೇ. 3 ರಷ್ಟು ಯುವಸಮುದಾಯ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿದ್ದಾರೆ. ಇದರಲ್ಲಿ ನೀವು ಈಗ ಭಾಗಿಯಾಗಿರುವುದು ಸಂತೋಷ ಪಡಬೇಕಾದ ಸಂಗತಿ. ಈ ಹಂತದಲ್ಲಿಯೇ ವಿದ್ಯಾರ್ಥಿಗಳೆಲ್ಲರೂ ದೊಡ್ಡ ಕನಸನ್ನು ಕಂಡು, ಗುರು–ಹಿರಿಯರು ತಂದೆ–ತಾಯಿಗಳು ಮತ್ತು ಸಮಾಜ ಮೆಚ್ಚುವಂತೆ ಬೆಳೆಯಬೇಕು. ಇಂದಿನ ಸಮಾಜದಲ್ಲಿ ಅವರವರ ಸವಾಲು ಸಮಸ್ಯೆಗಳನ್ನು ಅವರವರೇ ಎದುರಿಸಬೇಕಾದ ಅನಿವಾರ್ಯತೆ ಇದೆ. ಇದನ್ನು ಎದುರಿಸಲು ವಿದ್ಯಾರ್ಥಿಗಳಲ್ಲಿ ಛಲ, ಶ್ರಮ, ಉತ್ತಮವಾದ ಗುರಿ, ಆತ್ಮವಿಶ್ವಾಸ ಇರಬೇಕು ಎಂದು ಹೇಳಿದರು.

ಮಹಾರಾಣಿ ವಾಣಿಜ್ಯ ಕಾಲೇಜಿನ ಕನ್ನಡ ಅಧ್ಯಾಪಕರಾದ ಪ್ರೊ. ಮೈಸೂರು ಕೃಷ್ಣಮೂರ್ತಿಯವರು ಮಾತನಾಡುತ್ತಾ ಶಿಕ್ಷಣಕ್ಕೆ ಔದ್ಯೋಗಿಕ ಮತ್ತು ಔದ್ಯಮಿಕ ಆಯಾಮಗಳು ಇರುವಂತೆ ವಿದ್ಯಾರ್ಥಿಗಳಲ್ಲಿ ಗೆಲುವು, ಚೈತನ್ಯ, ಆತ್ಮವಿಶ್ವಾಸ, ಜೀವಪರ ಕಾಳಜಿ ಮತ್ತು ಆಶಾದಾಯಕ ಬದುಕನ್ನು ಕಾಣಲು ಸಾಂಸ್ಕೃತಿಕ ಆಯಾಮವೂ ಅತ್ಯಗತ್ಯ. ಸಾಂಸ್ಕೃತಿಕ ಚಟುವಟಿಕೆ ಮತ್ತು ಕಲೆ ವಿದ್ಯಾರ್ಥಿಗಳಲ್ಲಿ ಶಕ್ತಿಯನ್ನು ತುಂಬುವುದರಲ್ಲಿ ವಿಶೇಷ ಪಾತ್ರವಹಿಸಿವೆ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ಇದನ್ನು ಸಮಾನವಾಗಿ ಕೊಡಬೇಕು. ಮನುಷ್ಯನನ್ನು ನಿರಹಂಕಾರದಿಂದ ಬದುಕುವಂತೆ ಮಾಡುವುದು ಶಿಕ್ಷಣದ ಕೆಲಸ. ಅದಕ್ಕೆ ಪೂರಕವಾದದ್ದು ಕಲೆ. ಈ ಕಲೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಯುವಂತೆ ಶಿಕ್ಷಣ ಸಂಸ್ಥೆಗಳು ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಕಾಲೇಜು ನಿರಂತರವಾಗಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆದ್ಯತೆಯನ್ನು ನೀಡುತ್ತಾ ಬರುತ್ತಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾಲೇಜುಗಳು ಕೇವಲ ಪಠ್ಯ ವಿಷಯಗಳನ್ನು ಕಲಿಸುವ ಕಾರ್ಖಾನೆಗಳಾಗದೆ ಪರಿಪೂರ್ಣ ವ್ಯಕ್ತಿತ್ವ ರೂಪಿಸುವ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಾಗಬೇಕು. ವಿದ್ಯಾರ್ಥಿಗಳಲ್ಲಿರುವ ಸುಪ್ತಪ್ರತಿಭೆ ಅರಳಲು ಮತ್ತು ಸೃಜನಶೀಲತೆ ಬೆಳೆಯಲು ಅವಕಾಶಗಳನ್ನು ಒದಗಿಸಬೇಕು. ಆ ಮೂಲಕ ವ್ಯಕ್ತಿತ್ವ ವಿಕಸನವಾಗಬೇಕು. ಅದಕ್ಕಾಗಿ ಕಾಲೇಜುಗಳಲ್ಲಿ ಸಾಂಸ್ಕೃತಿಕ ವೇದಿಕೆಗಳು, ಕ್ರೀಡಾ ಚಟುವಟಿಕೆಗಳು. ಎನ್.ಸಿ.ಸಿ., ಎನ್‌ಎಸ್‌ಎಸ್, ಸ್ಕೌಟ್ಸ್, ರೆಡ್ ಕ್ರಾಸ್ ಅಸ್ತಿತ್ವಕ್ಕೆ ಬಂದಿವೆ. ಇವುಗಳ ಉಪಯೋಗವನ್ನು ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಪಡೆದುಕೊಳ್ಳಬೇಕೆಂಬ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ಯೋಗ ಮುಂತಾದ

ಚಟುವಟಿಕೆಗಳನ್ನು ಅಧ್ಯಯನದ ಭಾಗವಾಗಿ ಇಡಲಾಗಿದೆ. ವಿದ್ಯಾರ್ಥಿಗಳು ಪಠ್ಯದ ಕಲಿಕೆಯ ಜೊತೆಗೆ ತಮ್ಮ ಸರ್ವತೋಮುಖ ಅಭಿವೃದ್ಧಿಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ದ್ವಿತೀಯ ಎಂ.ಎ. ವಿದ್ಯಾರ್ಥಿನಿ ಕು. ಎಸ್. ಗಾಯತ್ರಿ ಸ್ವಾಗತಿಸಿದರು. ಕು. ಸನ್ನಿಧಿ ಮತ್ತು ತಂಡದವರು ಪ್ರಾರ್ಥಿಸಿದರು. ದ್ವಿತೀಯ ಎಂ.ಎ. ವಿದ್ಯಾರ್ಥಿ ಶ್ರೀ ಹೆಚ್.ಎಂ. ಅಮೋಘವರ್ಷ ವಂದಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್, ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಡಾ. ಎಂ.ಪಿ. ಸೋಮಶೇಖರ್, ಕ್ರೀಡಾ ವೇದಿಕೆಯ ಸಂಚಾಲಕರಾದ ಶ್ರೀ ಎಂ. ಕಾರ್ತಿಕ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಪ್ರಥಮ ಎಂಎಸ್ಸಿ ಭೌತಶಾಸ್ತ್ರ ವಿಭಾಗದ ಶ್ರೀ ವಿ. ಶ್ರೇಯಸ್ ನಿರೂಪಿಸಿದರು.

## ವಿಶ್ವ ಕೈ ನೈರ್ಮಲ್ಯ ದಿನ



**ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್** ವತಿಯಿಂದ ದಿನಾಂಕ 5.5.2022 ರಂದು ವಿಶ್ವ ಕೈ ನೈರ್ಮಲ್ಯ ದಿನವನ್ನು ಆಚರಿಸಲಾಯಿತು. ಇದರ ಅಂಗವಾಗಿ ವಿದ್ಯಾರ್ಥಿಗಳಿಗೆ ಕೈ ಶುಚಿತ್ವದ ಬಗ್ಗೆ ಅಂತರ್ ತರಗತಿ ಗಾಯನ ಮತ್ತು ನೃತ್ಯ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಜೊತೆಗೆ ಜೆಎಸ್‌ಎಸ್ ಆಸ್ಪತ್ರೆಯಿಂದ ಏರ್ಪಡಿಸಿದ್ದ ಪೋಸ್ಟರ್ ಪ್ರೆಸೆಂಟೇಷನ್ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ ಯವರು ಈ ವರ್ಷದ ಘೋಷಣಾ ವಾಕ್ಯವಾದ ಯುನೈಟ್ ಫಾರ್ ಸೇಫ್ಟಿ ಅಂಡ್ ಕ್ಲೀನ್ ಯುವರ್ ಹ್ಯಾಂಡ್ಸ್ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತಾ, ಪ್ರತಿಯೊಬ್ಬರು ಕೈಗಳನ್ನು ಆಗಾಗ್ಗೆ ತೊಳೆಯುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಎಲ್ಲರೂ ತಿಳಿದಿರುವ ಹಾಗೆ ಕರೋನಾ ಸೋಂಕಿಗೆ ಇಡೀ ದೇಶವೇ ಒಳಗಾಗಿರುವ ಇಂತಹ ಸಮಯದಲ್ಲಿ ಈ ಬಗ್ಗೆ ಹೆಚ್ಚು ಕಾಳಜಿ ವಹಿಸುವುದು ಅವಶ್ಯವಾಗಿದೆ. ಕೈ ತೊಳೆಯುವ ಪ್ರಮುಖ ಕ್ರಮಗಳನ್ನು ವಿಶ್ವ ಆರೋಗ್ಯ ಸಂಸ್ಥೆಯು ನೀಡಿದ್ದು, ಇದನ್ನು ಸರಿಯಾದ ರೀತಿಯಲ್ಲಿ ಪಾಲಿಸುವುದರಿಂದ ಸೋಂಕನ್ನು ತಡೆಗಟ್ಟಬಹುದೆಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಆಯೋಜಿಸಲಾಗಿದ್ದ ಅಂತರ್ ತರಗತಿ ಗಾಯನ ಮತ್ತು ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಾದ ಕು. ಟೆನ್ಸಿನ್ ಕುನ್ಸೆಲ್ ಮತ್ತು ತಂಡದವರು ಪ್ರಥಮ ಬಹುಮಾನವನ್ನು ಪಡೆದುಕೊಂಡರು. ಜೆಎಸ್‌ಎಸ್ ಆಸ್ಪತ್ರೆಯಿಂದ ಆಯೋಜಿಸಲಾಗಿದ್ದ ಪೋಸ್ಟರ್ ಪ್ರೆಸೆಂಟೇಷನ್ ಸ್ಪರ್ಧೆಯಲ್ಲಿ ಅಂತಿಮ ವರ್ಷದ ವಿದ್ಯಾರ್ಥಿನಿಯರಾದ ಕು. ಪಾಯಲ್ ರಾಯ್, ಕು. ಕವಿತ ಮತ್ತು ಕು. ಲಾವಣ್ಯರವರು ದ್ವಿತೀಯ ಬಹುಮಾನವನ್ನು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಬೋಧಕವೃಂದದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಂಶೋಧನೆ ಮತ್ತು ಆವಿಷ್ಕಾರವನ್ನು ತೀವ್ರಗೊಳಿಸುವುದರ ಕುರಿತು ವಿಚಾರಸಂಕಿರಣ



ವಿಚಾರಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ. ಡಿ.ಆರ್. ಅರುಣ್‌ಕುಮಾರ್, ಡಾ. ಎನ್.ಜಿ. ಮಲ್ಲೇಶ್, ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್ ಮತ್ತು ಶ್ರೀ ಎಚ್.ಎಸ್. ಸಂಜೀವ್

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಆಹಾರ ಸಂಸ್ಕರಣೆ ಮತ್ತು ಇಂಜಿನಿಯರಿಂಗ್ ವಿಭಾಗದ ವತಿಯಿಂದ ಅಧ್ಯಾಪಕರು, ಜೀವ ವಿಜ್ಞಾನ, ಸಂಶೋಧನಾ, ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗಾಗಿ ದಿನಾಂಕ 7.5.2022ರಂದು ಒಂದು ದಿನದ ವಿಚಾರಸಂಕಿರಣವನ್ನು ಏರ್ಪಡಿಸಲಾಗಿತ್ತು. ಈ ವಿಚಾರಸಂಕಿರಣವನ್ನು ಮೈಸೂರಿನ ಸಿಎಫ್‌ಟಿಆರ್‌ಐನ ನಿವೃತ್ತ ವಿಜ್ಞಾನಿಗಳಾದ ಡಾ. ಎನ್.ಜಿ. ಮಲ್ಲೇಶ್ ಅವರು ಉದ್ಘಾಟಿಸಿ ಆಹಾರ ವಿಜ್ಞಾನದಲ್ಲಿ ಸಂಶೋಧನೆಯ ಪ್ರಾಮುಖ್ಯತೆಯನ್ನು ಕುರಿತು ಮಾತನಾಡಿದರು. ಸಂಶೋಧನೆಯ ಅಭಿವೃದ್ಧಿಯೂ ಇಂದು ಅಗತ್ಯವಾಗಿದ್ದು ಕಚ್ಚಾ ವಸ್ತುಗಳ ಆಯ್ಕೆಯಿಂದ ಹಿಡಿದು ಆಹಾರದ ಗುಣಮಟ್ಟಗಳ ವಿಶೇಷತೆ, ಕಾನೂನಾತ್ಮಕ ಅಂಶಗಳು ಮತ್ತು ಆಹಾರದ ನೈರ್ಮಲ್ಯವನ್ನು ಕಾಪಾಡುವ ನಿರ್ಣಾಯಕ ಪಾತ್ರಗಳವರೆಗೆ ಇರುತ್ತದೆ ಎಂದರು.

ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಮಾತನಾಡಿ, ಜೀವನದಲ್ಲಿ ಆಹಾರ ಸಂಸ್ಕರಣೆಯು ಅತ್ಯಂತ ಮಹತ್ವದ್ದಾಗಿದೆ. ಆರೋಗ್ಯವನ್ನು ಕಾಪಾಡಿಕೊಳ್ಳಲು ಸುರಕ್ಷಿತ ಪೌಷ್ಠಿಕಾಂಶದ ಆಹಾರವನ್ನು ಒದಗಿಸುವ ಉದ್ದೇಶದಿಂದ ಉತ್ಪಾದನೆಯ ಹಂತದಿಂದ ಬಳಕೆಯ ಹಂತದವರೆಗೆ ಉತ್ತಮ ಗುಣಮಟ್ಟದಲ್ಲಿ ವಿತರಿಸಬೇಕಾಗಿದೆ. ಆಧುನಿಕ ಆಹಾರಗಳ ಪೂರೈಕೆಗೆ ಅಗತ್ಯವಿರುವ ಪ್ಯಾಕೇಜಿಂಗ್, ಇಂತಹ ಪ್ಯಾಕೇಜಿಂಗ್‌ಗೆ ಇರುವ ಸವಾಲುಗಳು, ಅಭಿವೃದ್ಧಿಪಡಿಸಿಕೊಳ್ಳುವ ಅಗತ್ಯತೆಯ ಜೊತೆಗೆ ಡಿಜಿಟಲೀಕರಣದ ಅವಶ್ಯಕತೆಯನ್ನು ಒದಗಿಸಿಕೊಳ್ಳಬೇಕಾಗಿದೆ ಎಂದರು.

ಉದ್ಘಾಟನೆಯ ನಂತರ ಎರಡು ಗೋಷ್ಠಿಗಳು ಜರುಗಿದವು. ಮೊದಲ ಗೋಷ್ಠಿಯಲ್ಲಿ ಸಿಎಫ್‌ಟಿಆರ್‌ಐನ ಫುಡ್ ಪ್ಯಾಕೇಜಿಂಗ್ ವಿಭಾಗದ ಪ್ರಧಾನ ವಿಜ್ಞಾನಿ ಡಿ.ಆರ್. ಅರುಣ್‌ಕುಮಾರ್ ಪನ್ನೀರಸೆಲ್ವಂ ಅವರು ಫುಡ್ ಪ್ಯಾಕೇಜಿಂಗ್ ಕುರಿತು ಉಪನ್ಯಾಸ ನೀಡಿದರು. ಪ್ರಯೋಜನಕಾರಿ ಮತ್ತು ಸುರಕ್ಷಿತ, ಸುಸ್ಥಿರ ಆಹಾರ ಪ್ಯಾಕೇಜಿಂಗ್ ವಸ್ತುಗಳ ಮಹತ್ವವನ್ನು ಕುರಿತು ತಿಳಿಸಿದರು. ಎರಡನೇ ಗೋಷ್ಠಿಯಲ್ಲಿ ನಂಜನಗೂಡಿನ ನೆಸ್ಲೆ ಕಂಪೆನಿಯ ಪ್ರೊಡಕ್ಷನ್ ಎಕ್ಸಿಕೂಟಿವ್ ಆಗಿರುವ ಶ್ರೀ ಎಚ್.ಎಸ್. ಸಂಜೀವ್‌ರವರು ಆಹಾರ ಸಂಸ್ಕರಣಾ ಉದ್ಯಮದ ಮಾರುಕಟ್ಟೆಯ ದೃಷ್ಟಿಕೋನ ಮತ್ತು ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿನ ಅವಕಾಶಗಳ ಬಗೆಗೆ ವಿವರಗಳನ್ನು ನೀಡಿದರು.

ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್ ಸ್ವಾಗತಿಸಿದರು. ವಿಭಾಗದ ಮುಖ್ಯಸ್ಥರಾದ ಕು. ಶ್ರಾವ್ಯ ಕಾರ್ಯಕ್ರಮವನ್ನು ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಭರತ್‌ರವರು ವಂದಿಸಿದರು. ಕು. ಸುಮನ್ ಮತ್ತು ತಂಡದವರು ಪ್ರಾರ್ಥಿಸಿದರು.

ಈ ವಿಚಾರಸಂಕಿರಣದಲ್ಲಿ 150ಕ್ಕೂ ಹೆಚ್ಚಿನ ಅಧ್ಯಾಪಕರು, ಸಂಶೋಧಕರು, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರ



ಸುತ್ತೂರು ಜೆಎಸ್‌ಎಸ್ ಬಿ.ಇಡಿ ಹಾಗೂ ಡಿ.ಇಎಲ್.ಇಡಿ ವಿದ್ಯಾರ್ಥಿಗಳಿಗೆ 7 ದಿನಗಳ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರವನ್ನು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಪ್ರಭಾರ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಉದ್ಘಾಟಿಸಿದರು. ಚಿತ್ರದಲ್ಲಿ ಪ್ರಾಂಶುಪಾಲರುಗಳಾದ ಡಾ. ಹೆಚ್.ಎಂ. ಮಹೇಶ್, ಶ್ರೀ ಎಸ್. ಶಿವಸ್ವಾಮಿ ಹಾಗೂ ಉಪನ್ಯಾಸಕರನ್ನು ಕಾಣಬಹುದು.

**ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ** ವತಿಯಿಂದ ಬಿ.ಇಡಿ. ಹಾಗೂ ಡಿ.ಇಎಲ್.ಇಡಿ. ವಿದ್ಯಾರ್ಥಿಗಳಿಗೆ 7 ದಿನಗಳ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಪ್ರಭಾರ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಅವಕಾಶಗಳಿದ್ದು, ಶಿಕ್ಷಣದ ಜೊತೆಗೆ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಿಕೊಂಡು ಪರೀಕ್ಷೆಗಳನ್ನು ಎದುರಿಸಿ ಉತ್ತಮ ಫಲಿತಾಂಶದೊಂದಿಗೆ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಹೆಚ್.ಎಂ. ಮಹೇಶ್‌ರವರು ಪ್ರಾಸ್ತಾವಿಕ ನುಡಿಗಳನ್ನಾಡಿ, ವಿದ್ಯಾರ್ಥಿಗಳಿಗೆ ಪದವಿಗಳ ಜೊತೆಗೆ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ವಿವಿಧ ರೀತಿಯ ಕೌಶಲಗಳ ಅಗತ್ಯವಿದ್ದು ಅವುಗಳನ್ನು ರೂಢಿಸಿಕೊಂಡು ಯಶಸ್ಸನ್ನು ಪಡೆಯಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಸ್. ನಾಗೇಂದ್ರ ಪ್ರಸಾದ್, ಜೆಎಸ್‌ಎಸ್ ಡಿ.ಇಎಲ್.ಇಡಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಶಿವಸ್ವಾಮಿ, ಸಹಶಿಕ್ಷಕರಾದ ಶ್ರೀ ಎಂ.ಎಸ್. ಭಾಸ್ಕರ್ ಉಪಸ್ಥಿತರಿದ್ದರು. ಕು. ಶೋಭ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಂ.ಎಲ್. ಪ್ರಿಯದರ್ಶಿನಿ ಸ್ವಾಗತಿಸಿದರು. ಶ್ರೀ ಪ್ರಸನ್ನಕುಮಾರ್ ವಂದಿಸಿದರು. ಶ್ರೀಮತಿ ಮಲ್ಲಿಗಾದೇವಿ ಕಾರ್ಯಕ್ರಮ ನಿರೂಪಿಸಿದರು.

## ಆರೋಗ್ಯ ತಪಾಸಣಾ ಶಿಬಿರ




**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ ಸ್ನಾತಕೋತ್ತರ ವಿಭಾಗದ** ವತಿಯಿಂದ ಉಚಿತ ತಪಾಸಣಾ ಶಿಬಿರವನ್ನು ಸುತ್ತೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ದಿನಾಂಕ 31.5.2022ರಂದು ಹಮ್ಮಿಕೊಳ್ಳಲಾಗಿತ್ತು.

ಈ ಶಿಬಿರದಲ್ಲಿ ಬಂಜೆತನ, ಮುಟ್ಟಿನ ಸಮಸ್ಯೆಗಳು, ಬಿಳಿಸೆರಗು, ಋತುಬಂಧದ ಸಮಸ್ಯೆಗಳು, ಸ್ತನರೋಗ, ಗರ್ಭಕೋಶದ ಗಡ್ಡೆ ಖಾಯಿಲೆಗಳಿಗೆ ತಪಾಸಣೆ ಹಾಗೂ ಸಲಹೆ ನೀಡಲಾಯಿತು.

ಶಿಬಿರದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಡಾ. ವಿದ್ಯಾ ನಾರಾಯಣ್, ಡಾ. ಶೃತಿ, ಸ್ನಾತಕೋತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು, ಹಾಗೂ ಕಛೇರಿಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

***



ಮೈಸೂರಿನ ಎನ್.ಜೆ.ಎಸ್. ಚಾರಿಟಬಲ್ ಟ್ರಸ್ಟ್ ವತಿಯಿಂದ **ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ,** ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಹಾಗೂ ಯೋಗ ಪ್ರಾಣ ವಿದ್ಯಾಕೇಂದ್ರ ಇವರ ಸಹಭಾಗಿತ್ವದೊಂದಿಗೆ ದಿನಾಂಕ 10.5.2022ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ ಆಮ್ಲಪಿತ್ತ, ಚರ್ಮರೋಗ, ಕೆಮ್ಮು, ಬೆನ್ನುನೋವು, ಕುತ್ತಿಗೆನೋವು, ಉಸಿರಾಟದ ತೊಂದರೆ, ಕೀಲುನೋವು, ಮಧುಮೇಹ, ಮಂಡಿನೋವು ಖಾಯಿಲೆಗಳಿಗೆ ತಪಾಸಣೆ ಹಾಗೂ ಸಲಹೆಗಳು ನೀಡಲಾಯಿತು. ಶಿಬಿರದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಡಾ. ಉನ್ನಿಕೃಷ್ಣನ್, ಡಾ. ಮಾನಸ, ಕಲಿಕಾ ವೈದ್ಯರು ಭಾಗವಹಿಸಿದ್ದರು. ಸುಮಾರು 44 ಮಂದಿ ಉಚಿತ ತಪಾಸಣೆಯ ಸೌಲಭ್ಯವನ್ನು ಪಡೆದರು.



**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಶಲ್ಯತಂತ್ರ ವಿಭಾಗದ** ವತಿಯಿಂದ ಉಚಿತ ತಪಾಸಣಾ ಶಿಬಿರವನ್ನು ಹಿನಕಲ್‌ನ ಪಾರ್ವತಿ ಮೆಡಿಕಲ್ಸ್‌ರವರ ಸಹಭಾಗಿತ್ವದೊಂದಿಗೆ ದಿನಾಂಕ 12.5.2022ರಂದು ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ ಶಲ್ಯತಂತ್ರ ವಿಭಾಗಕ್ಕೆ ಸಂಬಂಧಪಟ್ಟ ವ್ಯಾಧಿಗಳಾದ ಪೈಲ್ಸ್, ಫಿಸ್ತುಲಾ, ಫಿಷರ್, ಹರ್ನಿಯಾ ಮತ್ತು ಇತರೆ ಶಸ್ತ್ರಚಿಕಿತ್ಸಾ ಸಾಧ್ಯ ವ್ಯಾಧಿಗಳಿಗೆ ತಪಾಸಣಾ ಹಾಗೂ ಸಲಹೆಯನ್ನು ನೀಡಲಾಯಿತು.

ಸುಮಾರು 58 ಮಂದಿ ಶಿಬಿರದ ಪ್ರಯೋಜನ ಪಡೆದರು. ಅದರಲ್ಲಿ 8 ಮಂದಿಗೆ ಶಸ್ತ್ರಚಿಕಿತ್ಸೆ, 15 ಮಂದಿಗೆ ಒಳರೋಗಿ ಚಿಕಿತ್ಸೆಯ ಅವಶ್ಯಕತೆ ಇದೆ. ಅವರಿಗೆ ವಿಶೇಷ ರಿಯಾಯತಿ ದರದಲ್ಲಿ ಚಿಕಿತ್ಸೆಯನ್ನು ಮಾಡಲಾಗುವುದೆಂದು ತಿಳಿಸಲಾಯಿತು. ಶಿಬಿರದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಡಾ. ಪೂರ್ಣಿಮ ಜಾಲವಾದಿ, ಡಾ. ಪಿ.ಪಿ. ಅಯ್ಯಣ್ಣ, ಡಾ. ಪಿ.ಕೆ.ಎಂ. ಪೂರ್ಣಿಮ, ಸ್ನಾತಕೋತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು, ಶುಶ್ರೂಷಕರು ಹಾಗೂ ಕಛೇರಿಯ ಸಿಬ್ಬಂದಿಗಳು ಭಾಗವಹಿಸಿದ್ದರು.

***



**ಜೆಎಸ್ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ** ವತಿಯಿಂದ ಉಚಿತ ತಪಾಸಣಾ ಶಿಬಿರವನ್ನು ಸುತ್ತೂರು ಗ್ರಾಮ ಪಂಚಾಯಿತಿಯ ಸಹಭಾಗಿತ್ವದೊಂದಿಗೆ ಜೀಮಾರಹಳ್ಳಿಯಲ್ಲಿ ದಿನಾಂಕ 21.5.2022ರಂದು ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ ಅಮ್ಲಪಿತ್ತ, ಚರ್ಮರೋಗ, ಕೆಮ್ಮು, ಬೆನ್ನುನೋವು, ಕುತ್ತಿಗೆ ನೋವು, ಉಸಿರಾಟದ ತೊಂದರೆ, ಕೀಲುನೋವು, ಮಧುಮೇಹ, ಮಂಡಿನೋವು ಖಾಯಿಲೆಗಳಿಗೆ ತಪಾಸಣೆ ಹಾಗೂ ಸಲಹೆಗಳು ನೀಡಲಾಯಿತು. ಶಿಬಿರದಲ್ಲಿ ಜೆಎಸ್ಎಸ್ ಆಯುರ್ವೇದ ಆಸ್ಪತ್ರೆಯ ಡಾ. ಸಿ. ಛಾಯಾ, ಡಾ. ಸಿ.ಪಿ. ವಿನೀತ್, ಡಾ. ಪಿ.ಕೆ.ಎಂ. ಪೂರ್ಣಿಮ, ಸ್ನಾತಕೋತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು, ಶುಶ್ರೂಷಕರು ಹಾಗೂ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಈ ಶಿಬಿರದಲ್ಲಿ 122 ಜನರು ಉಚಿತ ತಪಾಸಣೆ ಹಾಗೂ ಉಚಿತ ಔಷಧಿಯ ಸೌಲಭ್ಯವನ್ನು ಪಡೆದರು.

## ಹೆಣ್ಣುಮಕ್ಕಳು ಭಯಬಿಟ್ಟು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು



ಮಹಿಳಾ ಸಬಲೀಕರಣ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ತಂಡದ ಸದಸ್ಯರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು.

ಹೆಣ್ಣುಮಕ್ಕಳು ಮನೆಯಿಂದ ಹೊರಬರಲು ಭಯಪಡುತ್ತಿದ್ದಾರೆ. ಭಯ ಬಿಟ್ಟು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದು ಬೆಂಗಳೂರಿನ ರೋಟರಿ ಇ–ಕ್ಲಬ್‌ನ ಅಧ್ಯಕ್ಷರಾದ ರೊ. ರಾಜಲಕ್ಷ್ಮಿಯವರು ತಿಳಿಸಿದರು.

**ಚಾಮರಾಜನಗರದ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ** ರೋಟರಿ ಸಂಸ್ಥೆಯ ಸಹಯೋಗದೊಂದಿಗೆ ದಿನಾಂಕ 19.5.2022ರಂದು ನಡೆದ ಮಹಿಳಾ ಸಬಲೀಕರಣ ಜಾಗೃತಿ ಅಭಿಯಾನ–2022 ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ನಗರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಜಾಗೃತಿಗಾಗಿ ಅನೇಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದು ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಜಾಗೃತಿ ಮೂಡಿಸುವ ದೃಷ್ಟಿಯಿಂದ ರೋಟರಿ ಸಂಸ್ಥೆ ಮತ್ತು ಇನ್ನರ್‌ವ್ಹೀಲ್ ಸಂಸ್ಥೆಗಳ ಸಹಯೋಗದೊಂದಿಗೆ ಮಹಿಳೆಯರ ಭಯಮುಕ್ತ ಕರ್ನಾಟಕ ಎಂಬ ಶೀರ್ಷಿಕೆಯಡಿಯಲ್ಲಿ 30 ದಿನ 30

ಜಿಲ್ಲೆಗಳಲ್ಲಿ 3500 ಕಿ.ಮೀ. ಅಂತರವನ್ನು ದ್ವಿಚಕ್ರವಾಹನ ಸವಾರಿಯ ಮೂಲಕ ಕ್ರಮಿಸುವ ಅಭಿಯಾನವನ್ನು ಹಮ್ಮಿಕೊಂಡಿದ್ದೇವೆ. ಆ ಮೂಲಕ ಮಹಿಳೆಯರಿಗೆ ಆತ್ಮವಿಶ್ವಾಸವನ್ನು ತುಂಬುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮಹಿಳೆಯರು ಯೋಗ, ವ್ಯಾಯಾಮ ಮೊದಲಾದ ದೈಹಿಕ ಚಟುವಟಿಕೆಗಳನ್ನು ರೂಢಿಸಿಕೊಂಡು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗುವುದರ ಮೂಲಕ ತಮ್ಮ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಆರ್.ಎಂ. ಸ್ವಾಮಿಯವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಮಧ್ಯರಾತ್ರಿಯಲ್ಲಿ ಹೆಣ್ಣುಮಗಳು ಒಬ್ಬಂಟಿಯಾಗಿ ನಿರ್ಭೀತಿಯಿಂದ ಓಡಾಡುತ್ತಾಳೋ ಅಂದೇ ನಮಗೆ ನಿಜವಾದ ಸ್ವಾತಂತ್ರ ಲಭಿಸುತ್ತದೆ ಎಂಬ ಗಾಂಧೀಜಿಯವರ ಮಾತಿನಂತೆ ಧ್ಯೇಯವನ್ನಿಟ್ಟುಕೊಂಡು 30 ಜಿಲ್ಲೆಗಳಲ್ಲಿ 30 ದಿನಗಳ ಕಾಲ ದ್ವಿಚಕ್ರ ವಾಹನ ಸವಾರಿಯ ಮೂಲಕ ಮಹಿಳಾ ಸಬಲೀಕರಣ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡು ಇಂದು ನಮ್ಮ ಚಾಮರಾಜನಗರಕ್ಕೆ ಆಗಮಿಸಿದ್ದಾರೆ. ಇವರಿಂದ ನಮ್ಮ ಹೆಣ್ಣುಮಕ್ಕಳಿಗೂ ಉತ್ತೇಜನ ಸಿಗಲಿ ಎಂಬ ಉದ್ದೇಶದಿಂದ ಕಾಲೇಜಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಅಭಿಯಾನ ತಂಡದ ಸದಸ್ಯರಾದ ಶ್ರೀಮತಿ ಅನಿತಾ ನವೀನ್ ಮತ್ತು ಕು. ಆರ್. ಸ್ವಾತಿಯವರು ಮಾತನಾಡುತ್ತಾ, ಮನೆಯ ಒಳಗೆ ಹಾಗೂ ಹೊರಗೆ ದುಡಿಯುವ ಮಹಿಳೆಯ ಶ್ರಮ ಪುರುಷನಿಗಿಂತ ಹೆಚ್ಚಿನದು. ಆದರೆ ಸಮಾಜದಲ್ಲಿ ಹೆಣ್ಣಿಗೆ ಸಮಾನತೆಯನ್ನು ಸಾಧಿಸಿಕೊಳ್ಳಲು ಸಾಧ್ಯವಾಗಿಲ್ಲ. ನಮ್ಮ ಕನಸಿನಂತೆ ಬದುಕನ್ನು ರೂಪಿಸಿಕೊಳ್ಳುತ್ತಾ ಸಾಧನೆಯ ಮೂಲಕ ಸಮಾಜಕ್ಕೆ ಕೊಡುಗೆಯನ್ನು ಕೊಡಬೇಕು. ಇದೇ ಮಹಿಳಾ ಸಬಲೀಕರಣ ಎಂದು ತಿಳಿಸಿದರು.

ಮಹಿಳಾ ಸಬಲೀಕರಣ ಜಾಗೃತಿ ಅಭಿಯಾನ ತಂಡದ ಸದಸ್ಯರನ್ನು ರೋಟರಿ ಸಂಸ್ಥೆ, ಇನ್ನರ್‌ವ್ಹೀಲ್ ಸಂಸ್ಥೆ ಮತ್ತು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ.ಎಸ್. ಮರಿಸ್ವಾಮಿಯವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಮಹಿಳಾ ಸಬಲೀಕರಣ ಜಾಗೃತಿ ಅಭಿಯಾನದ ಪ್ರಯುಕ್ತ ಈ ನಾಲ್ವರು ಹೆಣ್ಣುಮಕ್ಕಳು ದ್ವಿಚಕ್ರವಾಹನ ಸವಾರಿ ಮಾಡಿಕೊಂಡು ವಿವಿಧ ಜಿಲ್ಲೆಗಳಿಗೆ ಭೇಟಿಕೊಟ್ಟು 27ನೇ ದಿನಕ್ಕೆ ಚಾಮರಾಜನಗರಕ್ಕೆ ಬಂದಿದ್ದಾರೆ. ಇವರ ಆತ್ಮಸ್ಥೈರ್ಯ ನಮ್ಮ ವಿದ್ಯಾರ್ಥಿಗಳಿಗೆ ಮಾದರಿಯಾಗಿದೆ. ಮಹಿಳೆಯರು ಭಯಮುಕ್ತರಾಗಬೇಕು ಎಂಬುದು ಇವರ ಅಭಿಯಾನದ ಉದ್ದೇಶವಾಗಿದೆ. ಇವರ ಈ ಘನ ಉದ್ದೇಶ ಯಶಸ್ವಿಯಾಗಲಿ. ಮಹಿಳೆಯರು ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಮಾನಸಿಕ ಮತ್ತು ದೈಹಿಕ ಸಾಮರ್ಥ್ಯವನ್ನು ಗಳಿಸಿದರೆ, ಯಾವ ಸಾಧನೆಯನ್ನಾದರೂ ಮಾಡಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಇನ್ನರ್‌ವ್ಹೀಲ್ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸುಮತಿ ವೆಂಕಟೇಶ್, ನಿಯೋಜಿತ ಅಧ್ಯಕ್ಷರಾದ ಶ್ರೀಮತಿ ನಂದಿನಿ ಸುಮನ್ ಹಾಗೂ ರೋಟರಿ ಸಂಸ್ಥೆಯ ಅಧ್ಯಕ್ಷರಾದ ರೊ. ಎ. ಶ್ರೀನಿವಾಸ್, ರೋಟರಿ ಸಂಸ್ಥೆಯ ಕಾರ್ಯದರ್ಶಿಗಳಾದ ರೊ. ಎಲ್. ನಾಗರಾಜುರವರು ಉಪಸ್ಥಿತರಿದ್ದರು. ಶ್ರೀಮತಿ ಎಸ್. ಬಿಂದುಶ್ರೀ ಪ್ರಾರ್ಥಿಸಿದರು. ರೋಟರಿ ಸಂಸ್ಥೆಯ ಮಾಜಿ ಸಹಾಯಕ ಗೌರ್‍ನರ್ ರೊ. ಆರ್. ಸುಭಾಷ್‌ರವರು ಸ್ವಾಗತಿಸಿದರು. ಶ್ರೀಮತಿ ಕೆ.ಎಸ್. ಅರುಣಶ್ರೀ ವಂದಿಸಿದರು. ಶ್ರೀಮತಿ ಜಮುನ ಕಾರ್ಯಕ್ರಮವನ್ನು ನಿರೂಪಿಸಿದರು.

ಬಂಜೆ ತಾಯಿಯ ಬೇನೆಯನರಿವಳೆ?
ಬಲದಾಯಿ ಮುದ್ದ ಬಲ್ಲಳೆ?
ನೊಂದವರ ನೋವ ನೋಯದವರೆತ್ತಬಲ್ಲರೋ?
ಚನ್ನಮಲ್ಲಿಕಾರ್ಜುನಯ್ಯ ನಿರೆದೆಲಗು
ಒಡಲಲ್ಲಿ ಮುರಿದು ಹೊರಳುವೆನ್ನಳಲನು
ನೀವೆತ್ತ ಬಲ್ಲಿರೆ, ಎಲೆ ತಾಯಿಗಳಿರಾ?

**– ಅಕ್ಕಮಹಾದೇವಿ**

## ಕೃಷಿ ಕ್ಷೇತ್ರದ ನವೀನ ತಂತ್ರಜ್ಞಾನವು ಎಲ್ಲಾ ರೈತರಿಗೆ ತಲುಪಬೇಕು

ಕೃಷಿ ಕ್ಷೇತ್ರದಲ್ಲಿ ನವೀನ ತಂತ್ರಜ್ಞಾನದ ಬಳಕೆಯ ಅಗತ್ಯವಿದೆ. ಯುವಕರು ಈ ವಿಷಯದಲ್ಲಿ ಮುಂದಡಿಯಿಡಬೇಕು. ಕೃಷಿ ಕ್ಷೇತ್ರದ ನವೀನ ತಂತ್ರಜ್ಞಾನವನ್ನು ಎಲ್ಲಾ ರೈತರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕರಾದ ಶ್ರೀ ಎಸ್.ಎಂ. ಶಿವಶಂಕರಪ್ಪರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ** ಜೀವರಸಾಯನಶಾಸ್ತ್ರ ಸ್ನಾತಕೋತ್ತರ ವಿಭಾಗವು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಾಯೋಜಿತ ಪುನರುತ್ಪಾದಕ ಕೃಷಿ – ಜಾಗತಿಕ ಆಹಾರ ಉತ್ಪಾದನೆಗೆ ಸುಸ್ಥಿರ ತಂತ್ರಜ್ಞಾನ ಎಂಬ ವಿಷಯ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಆಹಾರದ ಕೊರತೆ ಮತ್ತು ಭೂಮಿ ಲಭ್ಯತೆಯ ಸಮಸ್ಯೆಗಳನ್ನು ಪರಿಹರಿಸಲು ಹೊಸ ತಂತ್ರಜ್ಞಾನಗಳ ಬಗ್ಗೆ ಜಾಗೃತಿ ಮೂಡಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಅವರು ಮಣ್ಣಿನ ಆರೋಗ್ಯ, ಕೃಷಿಯಲ್ಲಿನ ಸಂಶೋಧನೆ ಮತ್ತು ಆಹಾರ ಉತ್ಪಾದನೆಯ ಹೆಚ್ಚಳದ ಬಗ್ಗೆ ನಾವು ಹೆಚ್ಚು ಗಮನಹರಿಸಬೇಕು. ಆಧುನಿಕ ಕಾಲದಲ್ಲಿ ಪುನರುತ್ಪಾದಕ ಕೃಷಿಯ ಪ್ರಾಮುಖ್ಯತೆಯನ್ನು ಅರಿಯಬೇಕು ಎಂದರು.

